# ಕನ್ನಡ ಲೋಗೋ

(ಕನ್ನಡದಲ್ಲಿ ಗಣಕ ಕ್ರಮವಿಧಿ ರಚನಾ ಭಾಷೆ)

## ಬಳಕೆಯ ಕೈಪಿಡಿ


**ಎ. ಸತ್ಯನಾರಾಯಣ**
sathyaasn@gmail.com

# ಪರಿವಿಡಿ


| ಅಧ್ಯಾಯ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| ೧ | ಅನುಸ್ಥಾಪನೆ | ೧ |
| ೨ | ಬಳಕೆಯ ಆರಂಭ | ೨ – ೬ |
| ೩ | ಪ್ರೊಸೀಜರ್‌ಗಳ ರಚನೆ | ೭ – ೧೨ |
| ೪ | ಆಕೃತಿಗಳ ರಚನೆ | ೧೩ – ೧೬ |
| ೫ | ಆಕೃತಿಗಳನ್ನು ಸೇವ್ ಮಾಡುವುದು – ಲೇಖನಿ ಬಣ್ಣ, ಗಾತ್ರ, ಪರದೆ ಬಣ್ಣ ನಿಗದಿ | ೧೭ – ೧೮ |
| ೬ | ಅಂಕಗಣಿತ ಮತ್ತು ತರ್ಕ | ೧೯ – ೨೧ |
| ೭ | ಬಳಸಲು 'ಸಹಾಯ' | ೨ – ೨೫ |
| ೮ | ಕನ್ನಡ ಲಿಪಿ ಬೆರಳಚ್ಚು | ೨೫ – ೨೬ |

ಅಧ್ಯಾಯ – ೧

# ಅನುಸ್ಥಾಪನೆ

‘ಲೋಗೋ’ (LOGO - Logic Oriented, Graphic Oriented) ಲಾಂಗ್ವೇಜ್ ಮಕ್ಕಳಿಗಾಗಿಯೇ ಇರುವ ಒಂದು ‘ಕಂಪ್ಯೂಟರ್ ಪ್ರೋಗ್ರಾಮಿಂಗ್’ ಭಾಷೆ. ಇದೊಂದು ನಿರೂಪಿತ ಭಾಷೆ (ಇಂಟರ್‌ಪ್ರೆಟೆಡ್ ಲ್ಯಾಂಗ್ವೇಜ್). ನಿರೂಪಿತ ಭಾಷೆಯು ಸಂಕಲಿತವಾಗುವುದಿಲ್ಲ (ಕಂಪೈಲ್ ಆಗುವುದಿಲ್ಲ) ಬದಲಾಗಿ, ನಿರೂಪಕವು (ಇಂಟರ್‌ಪ್ರೆಟರ್) ಕ್ರಮವಿಧಿಯ ಪ್ರತಿಯೊಂದು ಸಾಲನ್ನು ಒಂದೊಂದಾಗಿ ಓದಿ, ಅದನ್ನು ಅನುಷ್ಠಾನಕ್ಕೆ ತರುತ್ತದೆ. ಹಿರಿಯರು–ಕಿರಿಯರು ಎಲ್ಲರಿಗೂ ಕಂಪ್ಯೂಟರ್ ಕ್ರಮವಿಧಿ ರಚಿಸುವ ಬಗೆಯನ್ನು ಬೋಧಿಸುವುದೇ ‘ಕನ್ನಡ ಲೋಗೋ’ವಿನ ಉದ್ದೇಶವಾಗಿದೆ.

ಕನ್ನಡ ಲೋಗೋವನ್ನು http://www.vishvakannada.com/KannadaLogo ಈ ಜಾಲತಾಣದಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

**ಅನುಸ್ಥಾಪನಾ ಕ್ರಮ (ಸೆಟಪ್)**

ಈ ಪ್ರೋಗ್ರಾಮ್‌ನ್ನು ಅನುಸ್ಥಾಪಿಸಿಕೊಳ್ಳಲು (ಇನ್‌ಸ್ಟಾಲ್‌ಮಾಡಿಕೊಳ್ಳಲು) KannadaLogoSetup.exe ಎಂಬುದನ್ನು ಡಬಲ್‌ಕ್ಲಿಕ್ ಮಾಡಿ ಮತ್ತು ತೆರೆಯ ಮೇಲೆ ಮೂಡುವ ಸಂದೇಶಗಳನ್ನು ಎಚ್ಚರಿಕೆಯಿಂದ ಓದಿ, ಪಾಲಿಸಿ, ಅಗತ್ಯ ಕ್ರಮಗಳನ್ನು ಅನುಸರಿಸಿ. ಸೆಟಪ್ ಪೂರ್ಣಗೊಂಡ ನಂತರ, ಡೆಸ್ಕ್‌ಟಾಪ್‌ನಲ್ಲಿ ‘ಕನ್ನಡ ಲೋಗೋ’ಎಂಬ ಒಂದು ಐಕಾನ್ ಕಾಣಿಸಿಕೊಳ್ಳುತ್ತದೆ.

**ಗಮನಿಸಿ:** ‘ಕನ್ನಡ ಲೋಗೋ’ಪ್ರೋಗ್ರಾಮ್ ‘ನುಡಿ’ ಕೀಬೋರ್ಡ್ ಡ್ರೈವರ್‌ನ್ನು ಉಪಯೋಗಿಸುತ್ತದೆ. (ನಿಮ್ಮ ಕಂಪ್ಯೂಟರ್‌ನಲ್ಲಿ ನುಡಿ ಕನ್ನಡ ಲಿಪಿ ತಂತ್ರಾಂಶ ಅನುಸ್ಥಾಪನೆಯಾಗಿದ್ದರೂ ಅಥವಾ ಅನುಸ್ಥಾಪನೆ ಆಗಿಲ್ಲದೆ ಇದ್ದರೂ ಸಹ) ‘ನುಡಿ’ ಕೀಬೋರ್ಡ್ ಡ್ರೈವರ್‌ನ್ನು ಪ್ರತ್ಯೇಕವಾಗಿ ಚಾಲನೆಗೊಳಿಸುವ ಅಗತ್ಯವಿಲ್ಲ. ‘ಕನ್ನಡ ಲೋಗೋ’ ತನ್ನಲ್ಲಿಯೇ ಇರುವ ‘ನುಡಿ’ ಕೀಬೋರ್ಡ್ ಡ್ರೈವರ್‌ನ್ನು ತಾನಾಗಿಯೇ ಚಾಲನೆಗೊಳಿಸುತ್ತದೆ. KanLogoHelp.chm ಎಂಬುದು ‘ಕನ್ನಡ ಲೋಗೋ’ಬಳಕೆಗೆ ಸಹಾಯ ಒದಗಿಸುವ ಹೆಲ್ಪ್ ಫೈಲ್. ಅದನ್ನು ತೆರೆಯಲು ವಿಂಡೋಸ್ ಎಕ್ಸ್‌ಪ್ಲೋರರ್‌ನಿಂದ ಸುಮ್ಮನೆ ಈ ಫೈಲ್ ಮೇಲೆ ಡಬಲ್‌ಕ್ಲಿಕ್ ಮಾಡಿ. ಲೋಗೋ ಪ್ರೋಗ್ರಾಮಿಂಗ್ ಭಾಷೆಯ ಪರಿಚಯ ನಿಮಗೆ ಈಗಾಗಲೇ ಇದ್ದರೆ, ಲೋಗೋದ ಕೀವರ್ಡ್‌ಗಳ ಕನ್ನಡದ ಸಮಾನಾಂತರ ಪದಗಳನ್ನು ತಿಳಿದುಕೊಳ್ಳಲು KannadaLogoKeywords.pdf ಎಂಬ ಫೈಲ್‌ನ್ನು ಓದಿ.

ಅಧ್ಯಾಯ – ೨

# ಬಳಕೆಯ ಆರಂಭ

(ಅಭ್ಯಾಸದ ಮೊದಲ ಸೆಷನ್)

'ಕನ್ನಡ ಲೋಗೋ' ನಿಮ್ಮ ಕಂಪ್ಯೂಟರಿನಲ್ಲಿ ಅನುಸ್ಥಾಪನೆಗೊಂಡ ನಂತರ, ಅದನ್ನು ಆರಂಭಿಸಲು ಡೆಸ್ಕ್‌ಟಾಪ್‌ನಲ್ಲಿರುವ ವಿಂಡೋಸ್‌ನ Start ಬಟನ್ನು ಕ್ಲಿಕ್‌ಮಾಡಿ, All Programsಗೆ ಹೋಗಿ, ನಂತರ, Kannada Logoಗೆ ಹೋಗಿ, ಅದರಲ್ಲಿರುವ Kannada Logo ಎಂಬುದನ್ನು ಒಮ್ಮೆ ಕ್ಲಿಕ್ ಮಾಡಿದರೆ ಈ ಕೆಳಕಂಡ ಪರದೆಯು ಕಾಣಿಸಿಕೊಳ್ಳುತ್ತದೆ. (ಅಥವಾ ಡೆಸ್ಕ್‌ಟಾಪ್‌ನಲ್ಲಿರುವ 'ಕನ್ನಡ ಲೋಗೋ' ಐಕಾನ್‌ನ್ನು ನೇರವಾಗಿ ಡಬಲ್‌ಕ್ಲಿಕ್ ಮಾಡಬಹುದು)




ಇಲ್ಲಿ ಒಂದು ದೊಡ್ಡದು ಮತ್ತೊಂದು ಚಿಕ್ಕದಾಗಿರುವ ಎರಡು ವಿಂಡೋಗಳು ಇರುವುದನ್ನು ಗಮನಿಸಿ. ಈ ವಿಂಡೋಗಳು ಇರುವುದು ಏತಕ್ಕೆ?, ಇದರ ಮೆನು ವಿವರಗಳು ಏನು? ಇದನ್ನು ಏತಕ್ಕಾಗಿ, ಹೇಗೆ ಬಳಸಬೇಕು? ಇಲ್ಲಿರುವ ಪುಶ್‌ಬಟನ್‌ಗಳನ್ನು ಕ್ಲಿಕ್‌ಮಾಡಿದರೆ ಏನಾಗುತ್ತದೆ? ಎಂಬ ಪ್ರಶ್ನೆಗಳಿಗೆ ಮುಂದೆ ಒಂದೊಂದಾಗಿ ಉತ್ತರಗಳು ನಿಮಗೆ ಸಿಗುತ್ತದೆ.

ಚಿಕ್ಕ ವಿಂಡೋದ ಬಲಮೂಲೆಯಲ್ಲಿ ಇರುವ 'ಪಾಲಿಸು' ಎಂಬುದರ ಪಕ್ಕದಲ್ಲಿರುವ ಪಟ್ಟಿಯ ಮೇಲೆ ಒಮ್ಮೆ ಮೌಸ್‌ನ್ನು ಕ್ಲಿಕ್‌ಮಾಡಿ. (ಈಗ ಕನ್ನಡ ಲೋಗೋವನ್ನು ಮೊಟ್ಟಮೊದಲಿಗೆ ಬಳಸಲು ನೀವು ಪೂರ್ಣವಾಗಿ ಸಜ್ಜಾಗಿದ್ದೀರಿ). ಈಗ, *ಮುಂದೆ* ಎಂದು ಬೆರಳಚ್ಚಿಸಿ. ನಂತರ 'ಪಾಲಿಸು' ಬಟನ್ನು ಕ್ಲಿಕ್‌ಮಾಡಿ. ನೀವು ಇಲ್ಲಿ ಎಂಟರ್ ಕೀಲಿಯನ್ನೂ ಸಹ ಒತ್ತಬಹುದು. ನೀವು *ಮುಂದೆ* ಎಂದು ಬೆರಳಚ್ಚಿಸಿದ ಪಟ್ಟಿಯ ಮೇಲೆ ಇರುವ 'ಆದೇಶಕ' ವಿಂಡೋದ ಮೊದಲ ಸಾಲಾಗಿ ಮುಂದೆ ಎಂಬುದು ಕಾಣಿಸಿಕೊಂಡು, 'ಇದಕ್ಕೆ ಸಾಕಷ್ಟು ಒಳಪಡಿಕೆ ಸಾಲದು' ಎಂಬ ಸಂದೇಶ ಮೂಡಿಬರುತ್ತದೆ. ಈಗ ಮತ್ತೆ ಪ್ರಯತ್ನಿಸಿ. ಮುಂದೆ ಎಂದು ಬೆರಳಚ್ಚಿಸಿ ಒಂದು ತೆರಪನ್ನು ನೀಡಿ, (ಅಂದರೆ, ಒಮ್ಮೆ ಸ್ಪೇಸ್‌ಬಾರನ್ನು ಒತ್ತಿ) ೧೦೦ ಎಂದು ಬೆರಳಚ್ಚಿಸಿ, ಎಂಟರ್ ಒತ್ತಿ. ಪರದೆಯ ಮಧ್ಯೆ ಇದ್ದ ತ್ರಿಕೋಣಾಕಾರವು ೧೦೦ ಹೆಜ್ಜೆಗಳಷ್ಟು ದೂರ ಚಲಿಸಿ, ಒಂದು ಗೆರೆ ಎಳೆದಿರುವುದು ಕಂಡುಬರುತ್ತದೆ. ಅಂದರೆ, ಮುಂದೆ ೧೦೦ ಎಂಬುದನ್ನು ಆಮೆಯು ಅರ್ಥಮಾಡಿಕೊಂಡು, ನಿಮ್ಮ ಆದೇಶದಂತೆ ೧೦೦ ಹೆಜ್ಜೆಗಳಷ್ಟು ದೂರ ಮುಂದೆ ಹೋಗಿದೆ.

***ಗಮನಿಸಿ:** ಪರದೆಯ ಮಧ್ಯೆ ಇರುವ ತ್ರಿಕೋಣಾಕಾರಾವು ನೀವು ನೀಡುವ ಆದೇಶಕ್ಕೆ ಪ್ರತಿಕ್ರಿಯಿಸುತ್ತದೆ. ಇದನ್ನು ಒಂದು **ಆಮೆ** ಎಂದು ನೀವು ಭಾವಿಸಬಹುದು (ನಿಮಗೆ ಸುಲಭವಾಗಿ ಅರ್ಥವಾಗಲಿ ಎಂದು ಇದನ್ನು ಒಂದು ಆಮೆ ಎಂದು ಕರೆಯಲಾಗಿದೆ). ಏಕೆಂದರೆ, ಆಮೆಯು ನಿಧಾನವಾಗಿ ಒಂದೊಂದೇ ಹೆಜ್ಜೆ ಇಡುತ್ತಾ ಮುಂದೆ ಚಲಿಸುತ್ತದೆ. ಆಮೆಯನ್ನು ಹೋಲುವಂತಹ ವಿದ್ಯುನ್ಮಾನ ರೋಬಾಟನ್ನು 'ಇಂಗ್ಲಿಷ್ ಲೋಗೋ'ದ ಪ್ರಥಮ ಆವೃತ್ತಿಯಲ್ಲಿ ಬಳಸಲಾಗಿತ್ತು. ದರ್ಶಕ ಪರದೆಯಲ್ಲಿನ ಸೂಚಕವು (ಕರ್ಸರ್) ಆಮೆಯನ್ನು ಸಂಕೇತಿಸುತ್ತದೆ. ಇಲ್ಲಿ ಆಮೆ ಎಂದರೆ ಕೇವಲ ಸೂಚಕ ಅಥವಾ ಪಾಯಿಂಟರ್ ಅಷ್ಟೇ.*

**ಈ ಕೆಳಕಂಡ ಹಜ್ಜೆಗಳನ್ನು ಅನುಸರಿಸಿ:**

- *ಬಲ ೯೦* ಎಂದು ಬೆರಳಚ್ಚಿಸಿ ಎಂಟರ್ ಕೀಲಿ ಅಥವಾ 'ಪಾಲಿಸು' ಒತ್ತಿ. (ಆಮೆಯು ಬಲಕ್ಕೆ ತಿರುಗುತ್ತದೆ. ಇಲ್ಲಿ ೯೦ ಅನ್ನುವುದು '೯೦ ಆಮೆ ತಿರುವುಗಳಷ್ಟು' ಎಂಬುದನ್ನು ಸೂಚಿಸುತ್ತದೆ)
- *ಮುಂದೆ ೧೦೦* ಬೆರಳಚ್ಚಿಸಿ ಅಥವಾ ಆಯ್ಕೆ ಮಾಡಿಕೊಂಡು ಎಂಟರ್ ಒತ್ತಿ. (ಆಮೆಯು ಯಾವ ದಿಕ್ಕಿಗೆ ತಿರುಗಿದೆಯೋ ಆ ದಿಕ್ಕಿನಲ್ಲಿ ಮತ್ತೆ ೧೦೦ ಹೆಜ್ಜೆಗಳಷ್ಟು ದೂರ ಚಲಿಸುತ್ತದೆ)
- *ಬಲ ೯೦* ಎಂದು ಬೆರಳಚ್ಚಿಸಿ ನಂತರ ಎಂಟರ್ ಒತ್ತಿ. (ಹಿಂದೆ ಇದ್ದ ಮುಖದಿಕ್ಕಿನಿಂದ ಮತ್ತೆ ಬಲಕ್ಕೆ ೯೦ ಡಿಗ್ರಿ ತಿರುಗಿ ನಿಲ್ಲುತ್ತದೆ)
- *ಮುಂದೆ ೧೦೦* ಬೆರಳಚ್ಚಿಸಿ ನಂತರ ಎಂಟರ್ ಒತ್ತಿ. (ಆಮೆಯು ಮತ್ತೆ ೧೦೦ ಹೆಜ್ಜೆಗಳಷ್ಟು ಮುಂದೆ ಹೋಗುತ್ತದೆ)
- ಮೇಲಿನ ಎರಡು ಸಾಲಿನಲ್ಲಿರುವುದನ್ನು ಪುನ ಮಾಡಿ (ಈಗ ನಿಮಗೆ ಒಂದು ಚೌಕದ ಆಕಾರ ದೊರೆಯುತ್ತದೆ)

ಗಮನಿಸಿ: ಆದೇಶಕ ವಿಂಡೋದಲ್ಲಿ ಈಗಾಗಲೇ ಇರುವ ಸಾಲುಗಳನ್ನೇ ಕ್ಲಿಕ್‌ಮಾಡಿ ಎಂಟರ್ ಒತ್ತಿದರೆ, ಅದೇ ಆದೇಶವನ್ನು ಮತ್ತೆ ಮತ್ತೆ ಬೆರಳಚ್ಚಿಸುವ ಸಮಯ, ಶ್ರಮ ಉಳಿತಾಯವಾಗುತ್ತದೆ.

ಈ ಚೌಕವನ್ನು ಅಳಿಸಲು, *ತೆರೆಅಳಿಸು* ಎಂದು ಬೆರಳಚ್ಚಿಸಿ ಎಂಟರ್ ಒತ್ತಿ. ಚೌಕ ಅಳಿಸಿಹೋಗುತ್ತದೆ. ಈಗ ಇದನ್ನು ಪ್ರಯತ್ನಿಸಿ:

- *ಮುಂದೆ ೧೦೦ ಬಲ ೯೦* ಎಂದು ಬೆರಳಚ್ಚಿಸಿ ಎಂಟರ್ ಒತ್ತಿ (ಆಮೆಯು ೧೦೦ ಹೆಜ್ಜೆಗಳಷ್ಟು ದೂರ ಹೋಗಿ ಬಲಕ್ಕೆ ೯೦ ಡಿಗ್ರಿಗಳಷ್ಟು ತಿರುಗಿ ನಿಲ್ಲುತ್ತದೆ)
- ಆದೇಶಕದಲ್ಲಿರುವ ಅದೇ ಆದೇಶವನ್ನು ಮೇಲುಬಾಣದ ಕೀಲಿಬಳಸಿ ಆಯ್ಕೆಮಾಡಿಕೊಂಡು ಎಂಟರ್ ಕೀಲಿ ಒತ್ತಿ.
- ಮೇಲಿನ ಸಾಲಿನಲ್ಲಿ ತಿಳಿಸಿರುವಂತೆ ಒಟ್ಟು ನಾಲ್ಕು ಬಾರಿ ಮಾಡಿ (ಪರದೆಯಲ್ಲಿ ಒಂದು ಚೌಕದ ಆಕಾರ ರೂಪುಗೊಳ್ಳುತ್ತದೆ)

*ಮುಂದೆ ೧೦೦ ಬಲ ೯೦* ಅನ್ನುವುದನ್ನು ನಾಲ್ಕು ಬಾರಿ ಪುನರಾರ್ತಿಸಿದರೆ ಈ ಚೌಕ ರಚನೆಯಾಯಿತು ಬೆರಳಚ್ಚಿನ ಕೆಲಸ ಉಳಿಸಲು, ಒಂದೇ ಆದೇಶವನ್ನು ನಾಲ್ಕು ಬಾರಿ ಮಾಡು ಎಂದು ಆದೇಶ ನೀಡಬಹುದು. ಅದನ್ನು ಹೀಗೆ ಮಾಡಿ:

- *ತೆರೆಅಳಿಸು* ಬೆರಳಚ್ಚಿಸಿ ಎಂಟರ್ ಒತ್ತಿ.
- *ಪುನ ೪ [ಮುಂದೆ ೧೦೦ ಬಲ ೯೦]* ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ. (ಒಮ್ಮೆಗೇ ಒಂದು ಚೌಕ ಮೂಡಿಬರುತ್ತದೆ)

ಚೌಕವನ್ನು ಸುಮ್ಮನೆ *ಚೌಕ* ಎಂದು ಬೆರಳಚ್ಚಿಸಿದರೆ ಚೌಕ ರೂಪುಗೊಳ್ಳುವಂತೆಯೂ ಮಾಡಬಹುದು. ಇದಕ್ಕಾಗಿ ಹೀಗೆ ಮಾಡಿ:

- *ತೆರೆಅಳಿಸು ಬೆರಳಚ್ಚಿಸಿ ಎಂಟರ್ ಒತ್ತಿ*
- ಆದೇಶಕದಲ್ಲಿ *ಆಗಲು ಚೌಕ* ಎಂದು ಬೆರಳಚ್ಚಿಸಿ. (ಈ ಕೆಳಕಂಡ ವಿಂಡೋ ಕಾಣಿಸಿಕೊಳ್ಳುತ್ತದೆ)




ಅದರಲ್ಲಿ;

- *ಪುನ ೪ [ಮುಂದೆ ೧೦೦ ಬಲ ೯೦]* ಎಂದು ಬೆರಳಚ್ಚಿಸಿ, ಎಂಟರ್ ಒತ್ತಿ. (ಬೆರಳಚ್ಚಿಸಿದ ಸಾಲು ಮಾಯವಾಗಿ ಮತ್ತೆ ಸೂಚಕದ ಮಿನುಗು ಮುಂದುವರೆಯುತ್ತದೆ) ನಂತರ ಮತ್ತೆ....
- *ಕೊನೆ* ಎಂದು ಬೆರಳಚ್ಚಿಸಿ, ಎಂಟರ್ ಒತ್ತಿ. (ತಕ್ಷಣವೇ ಆ ಪರದೆಯು ಮಾಯವಾಗಿ, 'ಚೌಕ ವ್ಯಾಖ್ಯಾನಿಸಲಾಗಿದೆ' ಎಂಬ ಸಂದೇಶವು ಆದೇಶಕದಲ್ಲಿ ಮೂಡಿರುವುದನ್ನು ಗಮನಿಸಿ)

***ಗಮನಿಸಿ:*** *ಪದೇ ಪದೇ ಒಂದೇ ಸಾಲನ್ನು ಬೆರಳಚ್ಚಿಸಲು ಕಷ್ಟವಾಗುತ್ತಿದೆಯೇ? ಯೋಚಿಸಬೇಡಿ. ಈಗಾಗಲೇ ಆದೇಶಕದಲ್ಲಿರುವ ಅದೇ ಸಾಲನ್ನು ನಕಲು (ಕಾಪಿ) ಮಾಡಿ ಸೂಕ್ತ ಸ್ಥಳದಲ್ಲಿ ಅಂಟಿಸಿ (ಪೇಸ್ಟ್ ಮಾಡಿ) ಎಂಟರ್ ಒತ್ತಿ ಅಥವಾ ಪಾಲಿಸು ಕ್ಲಿಕ್‌ಮಾಡಿ.} ಮುಂದೆ ಎಂಬ ಆದೇಶದ ಸಂಕ್ಷಿಪ್ತರೂಪವಾಗಿ ಕೇವಲ ಮು ಎಂದೂ ಸಹ ಬಳಸಬಹುದು. ಹಾಗೆಯೇ ಬಲ ಎಂಬುದನ್ನು ಕೇವಲ ಬ ಎಂದಷ್ಟೇ ಬಳಸಬಹುದು. ಇದರಿಂದ ಬೆರಳಚ್ಚಿನ ಶ್ರಮವನ್ನು ಉಳಿಸಬಹುದು. ಹೀಗೆಯೇ, ಕನ್ನಡ ಲೋಗೋದಲ್ಲಿ ಹಲವಾರು ಆದೇಶಗಳಿಗೆ ಸಂಕ್ಷಿಪ್ತರೂಪಗಳು ಇವೆ. ಅವು ಯಾವುವು ಎಂಬುದನ್ನು ತಿಳಿಯಲು, ಪ್ರತಿಯೊಂದೂ ಆದೇಶದ ಕುರಿತು ನೀಡಲಾಗಿರುವ 'ಸಹಾಯ'ವನ್ನು ಓದಿ. ಇದಕ್ಕಾಗಿ ಮೇನ್ ಮೆನುವಿನಲ್ಲಿರುವ ಸಹಾಯ ಎಂಬುದನ್ನು ಕ್ಲಿಕ್‌ಮಾಡಿ.*

ಈಗ ಚೌಕ ಎಂಬ ವಿಧಾನಕವನ್ನು ಅಂದರೆ ಪ್ರೊಸೀಜರ್‌ನ್ನು ವ್ಯಾಖ್ಯಾನಿಸಿದ್ದೀರಿ. (ಪರದೆಯಲ್ಲಿ ಇನ್ನೂ ಯಾವುದಾದರೂ ಆಕಾರ ಕಾಣಿಸುತ್ತಿದ್ದರೆ, *ತೆರೆಅಳಿಸು* ಮಾಡಿ), ಆದೇಶಕದಲ್ಲಿ ಸುಮ್ಮನೆ *ಚೌಕ* ಎಂದು ಬೆರಳಚ್ಚಿಸಿ ಪಾಲಿಸು ಕ್ಲಿಕ್‌ಮಾಡಿ ತಕ್ಷಣದಲ್ಲಿಯೇ ಪರದೆಯಲ್ಲಿ ಚೌಕ ರಚನೆಯಾಗುತ್ತದೆ.

ವ್ಯಾಖ್ಯಾನಿಸಿರುವ ಈ ಚೌಕ ಎಂಬುದನ್ನು ಒಂದು ಅತ್ಯಂತ ಚಿಕ್ಕ ವಿಧಾನಕ ಅಂದರೆ ಪ್ರೊಸೀಜರ್. ಕನ್ನಡ ಲೋಗೋದಿಂದ ನಿರ್ಗಮಿಸುವ ಮುನ್ನ ಇದನ್ನು ಉಳಿಸಿದರೆ, ಇದೇ ವಿಧಾನಕವನ್ನು ಮರುಭರಿಕೆ ಅಂದರೆ ರಿಲೋಡ್ ಮಾಡಿ ಮತ್ತೆ ಮತ್ತೆ ಬಳಸಬಹುದು. ಈಗ ಚೌಕವನ್ನು ಉಳಿಸಿ. ಕನ್ನಡ ಲೋಗೋವಿನ ಮೇನ್ ಮೆನುವಿನಲ್ಲಿರುವ ಉಳಿಸು ಕ್ಲಿಕ್‌ಮಾಡಿ. chowka ಎಂದು ಬೆರಳಚ್ಚಿಸಿ, ಕಡತವನ್ನು ಉಳಿಸಲು ಸೇವ್ ಕ್ಲಿಕ್‌ಮಾಡಿ (ಕಡತದ ಹೆಸರನ್ನು ಬೆರಳಚ್ಚಿಸುವ ಮುನ್ನ ಸ್ಕ್ರೋಲ್ ಲಾಕ್‌ನ್ನು ಆಫ್ ಮಾಡಿ)

ಪ್ರತಿ ಬಾರಿ ಕನ್ನಡ ಲೋಗೋವನ್ನು ಆರಂಭಿಸಿದಾಗ ಇದೇ chowka ಎಂಬ ಕಡತವನ್ನು ರಿಲೋಡ್ ಮಾಡಿ, ಚೌಕ ಎಂದು ಬೆರಳಚ್ಚಿಸಿದರೆ ಚೌಕ ಮೂಡುತ್ತದೆ. ಹೀಗಾಗಿ, *ಚೌಕ* ಎಂಬ ಹೆಸರಿನ ವಿಧಾನಕವನ್ನು ಬರೆದು, ಅದನ್ನು ಸೇವ್ ಮಾಡುವ ಮೂಲಕ ನೀವು ಒಂದು ಹೊಸ ಆದೇಶವನ್ನೇ ಸೃಷ್ಟಿಸಿದ್ದೀರಿ ಎಂಬುದನ್ನು ಗಮನಿಸಿ. ಸಂಪಾದಕ ಅಂದರೆ ಎಡಿಟರ್ ಬಳಸಿ ಚೌಕ ಎಂಬ ನೇರವಾಗಿ ಪ್ರೊಸೀಜರ್‌ನ್ನು ಬರೆಯಬಹುದು. ಇದು ಮಾಡುವುದು ಹೇಗೆ ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೇನ್ ಮೆನುವಿನಲ್ಲಿರುವ ನಿರ್ಗಮಿಸು ಕ್ಲಿಕ್‌ಮಾಡುವ ಮೂಲಕ ಕನ್ನಡ ಲೋಗೋದಿಂದ ಹೊರಗೆ ಬನ್ನಿ. ಕನ್ನಡ ಲೋಗೋದ ಅಭ್ಯಾಸದ ಪ್ರಥಮ ಪ್ರಯತ್ನವು ಇಲ್ಲಿಗೆ ಮುಕ್ತಾಯಗೊಳ್ಳುತ್ತದೆ.

**ನೀವು ಏನೇನು ಮಾಡಿದ್ದೀರೆಂದು ಒಮ್ಮೆ ಹಿಂತಿರುಗಿ ನೋಡೋಣ.**

*ಮೊದಲ ಹಂತದಲ್ಲಿ ಹೀಗೆ ಮಾಡಿದ್ದೀರಿ:*

- ಚೌಕದ ಒಂದು ಬದಿಯನ್ನು ರಚಿಸಲು *ಮುಂದೆ ೧೦೦* ಎಂದು ಆದೇಶಿಸಿದ್ದೀರಿ.
- ಆಮೆಯನ್ನು ಬಲಕ್ಕೆ ತಿರುಗಿಸಲು *ಬಲ ೯೦* ಎಂದು ಆದೇಶಿಸಿದ್ದೀರಿ.
- ಚೌಕದ ಮತ್ತೊಂದು ಬದಿ ರಚಿಸಲು *ಮುಂದೆ ೧೦೦* ಎಂಬ ಅದೇ ಆದೇಶವನ್ನು ಬಳಸಿದ್ದೀರಿ.
- ಮೇಲಿನಂತೆ ನಾಲ್ಕು ಬಾರಿ ಪುನರಾವರ್ತನೆ ಮಾಡಿದ ನಂತರ ಮೊದಲಿಗೆ ಚೌಕ ರಚನೆಯಾಗಿದೆ.

*ಎರಡನೆಯ ಹಂತದಲ್ಲಿ ಹೀಗೆ ಮಾಡಿದ್ದೀರಿ:*

- *ಮುಂದೆ ೧೦೦ ಬಲ ೯೦* ಅನ್ನುವ ಎರಡು ಆದೇಶಗಳನ್ನು ಜೊತೆಯಾಗಿ ನೀಡಿದ್ದೀರಿ.
- ಮೇಲಿನ ಸಾಲನ್ನೆ ನಾಲ್ಕು ಬಾರಿ ಪುನರಾವರ್ತಿಸಿ, ಒಂದು ಚೌಕ ಪಡೆದಿದ್ದೀರಿ.
- *ಪುನ ೪ [ಮುಂದೆ ೧೦೦ ಬಲ ೯೦]* ಎಂದು ಒಂದೇ ಸಾಲಿನಲ್ಲಿ ಆದೇಶಿಸುವ ಮೂಲಕ ಚೌಕವನ್ನು ಪಡೆದಿದ್ದೀರಿ.
- ಕಡೆಗೆ ಚೌಕವನ್ನು ಪಡೆಯಲು ಕೇವಲ *ಚೌಕ* ಎಂದು ಬೆರಳಚ್ಚು ಮಾಡಿ ಚೌಕವನ್ನು ಪಡೆದಿದ್ದೀರಿ (ಅದಕ್ಕಾಗಿ ಚೌಕವನ್ನು ವ್ಯಾಖ್ಯಾನಿಸಿದ್ದೀರಿ).
- ವ್ಯಾಖ್ಯಾನಿಸಲಾದ ಚೌಕ ಎಂಬ ಪ್ರೊಸೀಜರ್‌ನ್ನು ಮತ್ತೆ ಮತ್ತೆ ಬಳಸಲು ಸಾಧ್ಯವಾಗುವಂತೆ ಸೇವ್ ಮಾಡಿದ್ದೀರಿ.

**ಗಮನಿಸಿ:** ಮೇಲಿನ ಎರಡು ಹಂತಗಳಲ್ಲಿ ನೀವು ಮಾಡಿರುವ ಕೆಲಸಗಳನ್ನು ಕ್ರಮವಾಗಿ ಅಭ್ಯಸಿಸಿದರೆ, ಇದಿಷ್ಟು ತಿಳಿದುಬರುತ್ತದೆ: ಬೆರಳಚ್ಚಿನ ಕೆಲಸವು ಕ್ರಮೇಣ ಕಡಮೆಯಾಗಿದೆ. ಅಗತ್ಯವಿರುವ ಕೆಲಸವನ್ನು ನಿರ್ವಹಿಸಲು ಬೇರೆ ಬೇರೆ ರೀತಿಯಲ್ಲಿ ಅದೇ ಆದೇಶಗಳನ್ನು ಬಳಸಲಾಗಿದೆ. ಕೊನೆಗೆ ಚೌಕವನ್ನು ರಚಿಸಲು ಕೇವಲ ಚೌಕ ಎಂದಷ್ಟೇ ಹೇಳಿದರೆ ಸಾಕಾಗುವಂತೆ ಒಂದು ಪ್ರೊಸೀಜರ್‌ನ್ನು ರಚಿಸಲಾಗಿದೆ. ಹೀಗೆ, ಕನ್ನಡ ಲೋಗೋದಲ್ಲಿ ಮೂಲದಲ್ಲಿ ಇಲ್ಲದ *ಚೌಕ* ಎಂಬ ಒಂದು ಹೆಸರಿನ ಒಂದು ಹೊಸ ಆದೇಶವನ್ನು ರಚಿಸಲಾಗಿದೆ. (ಚೌಕ ಎಂಬ ಪ್ರೊಸೀಜರ್‌ನ್ನು ವ್ಯಾಖ್ಯಾನಿಸುವ ಮುನ್ನ ಚೌಕ ಎಂದು ಬೆರಳಚ್ಚಿಸಿದರೆ, **'ಚೌಕ – ಈ ಆದೇಶ ನನಗೆ ಗೊತ್ತಿಲ್ಲ'** ಎಂಬ ಸಂದೇಶ ಮೂಡುತ್ತದೆ)

**ಕನ್ನಡ ಲೋಗೋದ ಆದೇಶಗಳನ್ನು ಕಂಪ್ಯೂಟರ್ ಹೇಗೆ ಪಾಲಿಸುತ್ತದೆ ಎಂಬುದನ್ನು ಈಗ ತಿಳಿಯೋಣ**

ನೀವು ನೀಡಿರುವ ಆದೇಶಗಳು ಮತ್ತು ಅದಕ್ಕೆ ಅಗತ್ಯವಿರುವ ಇನ್‌ಪುಟ್, ಆದೇಶವನ್ನು ನೀಡಿದ ಮೇಲೆ ಎಂಟರ್ ಕೀಲಿಯನ್ನು ಅಥವಾ 'ಪಾಲಿಸು'ನ್ನು ಒತ್ತಲೇಬೇಕೆಂಬ ಕಡ್ಡಾಯ – ಇವುಗಳೆಲ್ಲವನ್ನು ಗಮನಿಸಿ, ಈ ಕೆಳಕಂಡ ತೀರ್ಮಾನಕ್ಕೆ ಬರಬಹುದು.

**ಕನ್ನಡ ಲೋಗೋದಲ್ಲಿನ ಆಮೆಗೆ:**

- ಒಂದು **ಆದೇಶ** ಇರಲೇಬೇಕು. ಉದಾ.: *ಮುಂದೆ, ಬಲ*
- ಆದೇಶಕ್ಕೆ ಸಾಕಷ್ಟು ಒಳಪಡಿಕೆಗಳು ಅಂದರೆ ಇನ್‌ಪುಟ್ ಬೇಕು. ಉದಾ.: ಮುಂದೆ ೧೦೦ (೧೦೦ ಹೆಜ್ಜೆಗಳಷ್ಟು ದೂರ) ಬಲ ೯೦ (೯೦ ಡಿಗ್ರಿಗಳಷ್ಟು ತಿರುವು)
- ಆದೇಶ ಜಾರಿಗೊಳಿಸಲು ಎಂಟರ್ ಕೀಲಿ ಅಥವಾ ಪಾಲಿಸು ಒತ್ತುಗುಂಡಿಯನ್ನು ಒತ್ತಲೇಬೇಕು (ಅಂದರೆ ಮುಂದೆ ೧೦೦ ಹೆಜ್ಜೆ ಹಾಕಲು ಆರಂಭಿಸು ಎಂಬ ನಿರ್ದೇಶನ)

ಎಂಟರ್ ಕೀಲಿ ಒತ್ತಿದಾಗ ಅಥವಾ ಪಾಲಿಸು ಕ್ಲಿಕ್‌ಮಾಡಿದ ತಕ್ಷಣ, ಕನ್ನಡ ಲೋಗೋ ಮೊದಲಿಗೆ ಮುಂದೆ ಎಂಬ ಆದೇಶ ಪಾಲಿಸುತ್ತದೆ. ನಂತರ ಬಲ ಎಂಬ ಆದೇಶ ಪಾಲಿಸುತ್ತದೆ. ಇದೇ ಕ್ರಮದಲ್ಲಿ ಎಷ್ಟು ಆದೇಶಗಳನ್ನು ನೀಡಿದರೂ ಎಲ್ಲವನ್ನೂ ಸಹ ಪಾಲಿಸುತ್ತದೆ. ಆದರೆ, ನೀಡಿದ ಎಲ್ಲಾ ಆದೇಶಗಳು ನಿಯಮಬದ್ಧವಾಗಿ ಇರಬೇಕು. ಇಲ್ಲದಿದ್ದರೆ, 'ಕನ್ನಡ ಲೋಗೋ'ಈ ಕುರಿತು ಸಂದೇಶಗಳನ್ನು ಪ್ರಕಟಿಸುತ್ತದೆ. ಅವುಗಳನ್ನು ಅನುಸರಿಸಿ, ಆದೇಶಗಳನ್ನು ನೀಡುವಲ್ಲಿ ಇರುವ ದೋಷಗಳನ್ನು ಸರಿಪಡಿಸಿಕೊಂಡು ಮುಂದುವರೆಯಬೇಕು.

**ಕನ್ನಡ ಲೋಗೋದ ಆದೇಶಕ ವಿಂಡೋದಲ್ಲಿ ಒಂದೇ ಸಾಲಿನಲ್ಲಿ ಎಷ್ಟು ಬೇಕಾದರೂ ಆದೇಶಗಳನ್ನು ನೀಡಬಹುದು. ಅದಕ್ಕಾಗಿ ಕೆಲವು ನಿಯಮಗಳನ್ನು ಪಾಲಿಸಬೇಕು. ಅವುಗಳೆಂದರೆ:**

- ಒಂದು ಆದೇಶಕ್ಕೆ ಕಡ್ಡಾಯವಾಗಿ ಇನ್‌ಪುಟ್ (ಆರ್ಗ್ಯೂಮೆಂಟ್) ಇರಲೇಬೇಕು.
- ಆದೇಶ ಮತ್ತು ಇನ್‌ಪುಟ್ ನಡುವೆ ಒಂದು ತೆರಪು ಕಡ್ಡಾಯವಾಗಿ ಇರಬೇಕು.
- ಒಂದು ಆದೇಶ, ಅದಕ್ಕೆ ಒಂದು ಇನ್‌ಪುಟ್. ನಂತರ ಮತ್ತೊಂದು ಆದೇಶ ಅದಕ್ಕೆ ಒಂದು ಇನ್‌ಪುಟ್, ಈ ಕ್ರಮದಲ್ಲಿ ಎಷ್ಟು ಬೇಕಾದರೂ ಆದೇಶಗಳನ್ನು ಒಂದೇ ಸಾಲಿನಲ್ಲಿ ನೀಡಬಹುದು [ಪ್ರತಿಯೊಂದಕ್ಕೂ ಒಂದು ತೆರೆಪು (ಸ್ಪೇಸ್) ಕಡ್ಡಾಯವಾಗಿ ಇರಲೇಬೇಕು]
- ಒಂದೇ ಸಾಲಿನಲ್ಲಿ ನೀಡಲಾಗಿರುವ ಎಲ್ಲಾ ಆದೇಶಗಳನ್ನು ಒಂದೊಂದಾಗಿ ಜಾರಿಗೊಳಿಸಲು ಎಂಟರ್ ಕೀಲಿ ಅಥವಾ ಪಾಲಿಸು ಒತ್ತುಗುಂಡಿಯನ್ನು ಒತ್ತಲೇಬೇಕು.

**ವಿಶೇಷವಾಗಿ ಗಮನಿಸಿ:** ಕನ್ನಡ ಲೋಗೋದ ಬಳಕೆ ಕುರಿತು ಇನ್ನಷ್ಟು ಹೆಚ್ಚಿನ ಮಾಹಿತಿಗಳನ್ನು ತಿಳಿಯಲು, ಸಹಾಯ ಕಡತವನ್ನು ಪರಿಶೀಲಿಸಿ. ಸಹಾಯ ಕಡತದಲ್ಲಿ, ಪರಿಚಯ ಎಂಬ ವಿಭಾಗದಲ್ಲಿ, 'ಕನ್ನಡ ಲೋಗೋ'ಎಂದರೇನು?, ಇದು ಏಕೆ ಬೇಕು? ಎಲ್ಲಿಂದ ಪ್ರಾರಂಭಿಸಬೇಕು? ಎಂಬ ಅಧ್ಯಾಯಗಳನ್ನು ನೀಡಲಾಗಿದೆ. ಇವುಗಳನ್ನೂ ಸಹ ನೋಡಿ. ಇದಕ್ಕಾಗಿ, ಕನ್ನಡ ಲೋಗೋದ ಮೇನ್ ಮೆನುವಿನಲ್ಲಿರುವ **ಸಹಾಯ -> ಪರಿವಿಡಿ** ಎಂಬುದನ್ನು ಕ್ಲಿಕ್‌ಮಾಡಿ. ಪರದೆಯಲ್ಲಿ ಎರಡು ಭಾಗಗಳು ಉಳ್ಳ, Kannada Logo Help ಎಂಬ ಶೀರ್ಷಿಕೆಯ ವಿಂಡೋ ಕಾಣಿಸಿಕೊಳ್ಳುತ್ತದೆ. ಈ ವಿಂಡೋದ ಎಡಭಾಗದಲ್ಲಿ **ಪರಿಚಯ, ಕನ್ನಡ ಬೆರಳಚ್ಚು ಸಹಾಯ, ಜಿ.ಯು.ಐ. ಇಂಟರ್‌ಫೇಸ್ ಬಳಕೆ** ಮತ್ತು **ಭಾಷೆಯ ಬಳಕೆ** ಎಂಬ ನಾಲ್ಕು ವಿಭಾಗಗಳು ಇವೆ. ಬಲಭಾಗದಲ್ಲಿ ಆಯಾಯ ಅಧ್ಯಾಯದ ವಿವರಗಳು ಕಾಣಿಸಿಕೊಳ್ಳುತ್ತವೆ. ಪರಿಚಯ ಎಂಬ ವಿಭಾಗದ ಮೇಲೆ ಕ್ಲಿಕ್‌ಮಾಡಿದರೆ ತೆರೆದುಕೊಳ್ಳುವ ಅಧ್ಯಾಯಗಳನ್ನು ಒಂದೊಂದಾಗಿ ಕ್ಲಿಕ್‌ಮಾಡುವ ಮೂಲಕ 'ಕನ್ನಡ ಲೋಗೋ'ಕುರಿತ ಹೆಚ್ಚಿನ ಪರಿಚಯವನ್ನು ಮಾಡಿಕೊಳ್ಳಿ.

### ಅಧ್ಯಾಯ – ೩

## ಪ್ರೊಸೀಜರ್‌ಗಳ ರಚನೆ

(ಅಭ್ಯಾಸದ ಎರಡನೆಯ ಸೆಷನ್)

ಮೊದಲಿಗೆ ಕಂಪ್ಯೂಟರ್‌ನ್ನು ಸ್ವಿಚ್‌ಆನ್ ಮಾಡಿ. ಕನ್ನಡ ಲೋಗೋ ಆರಂಭಿಸಲು ಡೆಸ್ಕ್‌ಟಾಪ್‌ನಲ್ಲಿರುವ ವಿಂಡೋಸ್‌ನ Start ಬಟನ್ನನ್ನು ಕ್ಲಿಕ್‌ಮಾಡಿ, All Programsಗೆ ಹೋಗಿ, ನಂತರ, Kannada Logoಗೆ ಹೋಗಿ, ಅದರಲ್ಲಿರುವ Kannada Logo ಎಂಬುದನ್ನು ಒಮ್ಮೆ ಕ್ಲಿಕ್ ಮಾಡಿದರೆ ಈ ಕೆಳಕಂಡ ಪರದೆಯು ಕಾಣಿಸಿಕೊಳ್ಳುತ್ತದೆ. (ಅಥವಾ ಡೆಸ್ಕ್‌ಟಾಪ್‌ನಲ್ಲಿರುವ 'ಕನ್ನಡ ಲೋಗೋ'ಐಕಾನ್‌ನ್ನು ನೇರವಾಗಿ ಡಬಲ್‌ಕ್ಲಿಕ್ ಮಾಡಬಹುದು) ಕನ್ನಡ ಲೋಗೋದ ಮೇನ್ ಮೆನು ಮತ್ತು ಆದೇಶಕ ವಿಂಡೋ (ಕಮಾಂಡರ್ ವಿಂಡೋ) ಕಾಣಿಸಿಕೊಳ್ಳುತ್ತವೆ.

**ಕ್ರಮವಾಗಿ ಕೆಳಕಂಡವುಗಳನ್ನು ಮಾಡಿ:**

- ಮೊದಲಿಗೆ ಆದೇಶಕದಲ್ಲಿ *ಮುಂದೆ ೧೦೦ ಬಲ ೯೦* ಎಂದು ಬೆರಳಚ್ಚಿಸಿ ಎಂಟರ್ ಕೀಲಿ ಅಥವಾ ಪಾಲಿಸು ಗುಂಡಿಯನ್ನು ಒತ್ತಿ. (ಆಮೆಯು ೧೦೦ ಹೆಜ್ಜೆಗಳಷ್ಟು ಮುಂದೆ ಸಾಗಿ, ಗೆರೆಯನ್ನು ಎಳೆದು, ಬಲಕ್ಕೆ ಮುಖ ಮಾಡಿ ನಿಲ್ಲುತ್ತದೆ ಮತ್ತು ಬೆರಳಚ್ಚಿಸಿದ ಆದೇಶದ ಸಾಲು ಅದರ ಮೇಲಿನ ವಿಂಡೋದಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಗಮನಿಸಿ)
- *ತೆ.ಅ* ಎಂದು ಬೆರಳಚ್ಚಿಸಿ ಎಂಟರ್ ಕೀಲಿ ಅಥವಾ ಪಾಲಿಸು ಗುಂಡಿಯನ್ನು ಒತ್ತಿ. (ಆಮೆಯು ಎಳೆದ ಗೆರೆಯನ್ನು ಅಳಿಸಿ, ತಾನು ಮೊದಲಿದ್ದ ಸ್ಥಾನಕ್ಕೆ ಹಿಂದಿರುಗಿ, ಮೊದಲಿದ್ದ ದಿಕ್ಕಿಗೆ ಮುಖಮಾಡಿ ನಿಲ್ಲುತ್ತದೆ)
- ಈಗಾಗಲೇ ಆದೇಶಕದಲ್ಲಿರುವ *ಮುಂದೆ ೧೦೦ ಬಲ ೯೦* ಎಂಬ ಸಾಲನ್ನು ಕ್ಲಿಕ್‌ಮಾಡಿ, ಎಂಟರ್ ಅಥವಾ ಪಾಲಿಸು ಗುಂಡಿಯನ್ನು ಒತ್ತಿ. ನಂತರ ಮತ್ತೆ ಮತ್ತೆ, ನಾಲ್ಕು ಬಾರಿ ಅದೇ, ಸಾಲನ್ನು ಆಯ್ಕೆಮಾಡಿ ಎಂಟರ್ ಅಥವಾ ಪಾಲಿಸು ಗುಂಡಿಯನ್ನು ಒತ್ತಿ. (ಚೌಕ ಮೂಡುತ್ತದೆ)
- ಚೌಕ ಎಂದು ಆದೇಶಕದಲ್ಲಿ ಬೆರಳಚ್ಚಿಸಿ, ಎಂಟರ್ ಕೀಲಿಯನ್ನು ಒತ್ತಿ. (ಚೌಕ : ಈ ಆದೇಶ ನನಗೆ ಗೊತ್ತಿಲ್ಲ – ಎಂಬ ಸಂದೇಶವು ಮೂಡುತ್ತದೆ).

| |
|---|
| ಗಮನಿಸಿ: ಚೌಕ ಎಂಬುದನ್ನು ನೀವು ಹಿಂದಿನ ಅಭ್ಯಾಸದ ಸೆಷನ್‌ನಲ್ಲಿ ವ್ಯಾಖ್ಯಾನಿಸಿದ್ದೀರಿ ಮತ್ತು chowka ಎಂಬ ಹೆಸರಿನ ಕಡತವಾಗಿ ಸೇವ್ ಮಾಡಿರುವುದನ್ನು ನೆನಪಿಸಿಕೊಳ್ಳಿ. ಈಗ ಅದನ್ನು ಮರುಭರಿಕೆ ಅಂದರೆ ರಿಲೋಡ್ ಮಾಡಿದರೆ ಮಾತ್ರ, ಈ ಚೌಕ ಎಂಬ ಪ್ರೊಸೀಜರ್ ಬಳಸಬಹುದು. |

**ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ:**

- ಕನ್ನಡ ಲೋಗೋದ ಮೇನ್ ಮೆನುವಿನಲ್ಲಿರುವ **ತೆಗೆ** ಕ್ಲಿಕ್‌ಮಾಡಿ (ಕಡತಗಳನ್ನು ಆಯ್ಕೆಮಾಡಿಕೊಳ್ಳಬಹುದಾದ ವಿಂಡೋ ಕಾಣಿಸಿಕೊಳ್ಳುತ್ತದೆ)
- ಹಿಂದಿನ ಅಭ್ಯಾಸ ಪ್ರಯತ್ನದಲ್ಲಿ ರಚಿಸಿ, ಉಳಿಸಲಾಗಿರುವ chowka ಎಂಬ ಕಡತವನ್ನು ಡಬಲ್‌ಕ್ಲಿಕ್‌ಮಾಡಿ (ಈ ಕಡತವು ಕಾರ್ಯಾವಕಾಶಕ್ಕೆ ಮರುಭರಿಕೆ ಆಗುತ್ತದೆ). (ಕಾಣಿಸಿಕೊಂಡ ವಿಂಡೋದಲ್ಲಿ ಈ ಕಡತ ಇಲ್ಲದಿದ್ದರೆ, ಅದನ್ನು ಎಲ್ಲಿ ಸೇವ್ ಮಾಡಿದ್ದೀರೋ ಆ ಡೈರೆಕ್ಟರಿಗೆ ಹೋಗಿ ಅದನ್ನು ಡಬಲ್‌ಕ್ಲಿಕ್‌ಮಾಡಿ)
- ಈಗ ಚೌಕ ಎಂದು ಬೆರಳಚ್ಚಿಸಿ ಎಂಟರ್ ಒತ್ತಿದರೆ, ಚೌಕ ರಚನೆಯಾಗುತ್ತದೆ. (ಇದಕ್ಕಾಗಿ, ಕಾರ್ಯಾವಕಾಶದಲ್ಲಿ ಮರುಭರಿಕೆಯಾಗಿರುವ chowka ಎಂಬ ಕಡತದಲ್ಲಿ ವ್ಯಾಖ್ಯಾನಿಸಲಾಗಿರುವ, *ಪುನ ೪ [ಮುಂದೆ ೧೦೦ ಬಲ ೯೦]* ಎಂಬ ಒಂದು ಸಾಲಿನ ಆದೇಶವನ್ನು ಕನ್ನಡ ಲೋಗೋ ಜಾರಿಗೊಳಿಸುತ್ತದೆ)
- ತೆರೆಅಳಿಸು ಅಥವಾ ತೆ.ಅ ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ (ಚೌಕ ಅಳಿಸಲ್ಪಡುತ್ತದೆ)
- *ಪಠ್ಯಅಳಿಸು* ಅಥವಾ *ಪ.ಅ* ಎಂದು ಬೆರಳಚ್ಚಿಸಿ ಎಂಟರ್ ಕೀಲಿ ಒತ್ತಿ (ಆದೇಶದಲ್ಲಿ ಇರುವ ಎಲ್ಲಾ ಆದೇಶದ ಸಾಲುಗಳು ಅಳಿಸಲ್ಪಟ್ಟು ಆದೇಶಕವು ಖಾಲಿಯಾಗುತ್ತದೆ.) (ಬೆರಳಚ್ಚಿಸುವಾಗ ಗಮನಿಸಿ. ಪಠ್ಯ ಎಂಬುದನ್ನು

ಬೆರಳಚ್ಚಿಸಿದ ನಂತರ ಅ ಎಂಬುದನ್ನು ಮೊಲಿಗೆ ಒತ್ತಿದರೆ ಅ ಮೂಡುವುದಿಲ್ಲ. ಎರಡನೆಯ ಬಾರಿ ಒತ್ತಿದರೆ ಅ ಮೂಡುತ್ತದೆ. ಇದಕ್ಕೆ ಕಾರಣವನ್ನು ತಿಳಿಯಲು– ಆದೇಶಗಳನ್ನು ಬೆರಳಚ್ಚಿಸಲು ಕೀಲಿಮಣೆ ಅಭ್ಯಾಸ – ಎಂಬ ವಿಭಾಗವನ್ನು ಓದಿ)

**ಇವುಗಳನ್ನು ಗಮನಿಸಿ:**

- ಪ್ರತಿಬಾರಿ ನೀವು *ತೆರೆಅಳಿಸು* ಅಥವಾ ಅದರ ಸಂಕ್ಷಿಪ್ತರೂಪವಾದ *ತೆ.ಅ* ಎಂಬುದನ್ನು ಬೆರಳಚ್ಚಿಸಿ ಎಂಟರ್ ಕೀಲಿ ಒತ್ತಿದಾಗ ಪರದೆಯಲ್ಲಿ ರಚಿತವಾಗಿರುವ ಯಾವುದೇ ಚಿತ್ರ, ಗೆರೆ ಅಥವಾ ಆಕೃತಿಯು ಅಳಿಸಲ್ಪಟ್ಟು, ಆಮೆಯು ಎಲ್ಲಿಯೇ ಇದ್ದರೂ ಅದರ ಮೂಲನೆಲೆಗೆ ಬಂದು ಸೇರುತ್ತದೆ ಮತ್ತು ಅದರ ಮುಖದಿಕ್ಕು ಮೇಲ್ಮುಖವಾಗಿಯೇ ಇರುತ್ತದೆ.
- ಕನ್ನಡ ಲೋಗೋದಲ್ಲಿನ ಆಮೆಯು ಚಲಿಸುವಾಗ ತನ್ನೊಂದಿಗೆ ಲೇಖನಿ ಅಂದರೆ ಪೆನ್ ಒಂದನ್ನು ಇಟ್ಟುಕೊಂಡು ಗೆರೆ ಎಳೆಯುತ್ತಾ ಸಾಗುತ್ತದೆ.  (ಆಮೆಯು ಗೆರೆ ಎಳೆಯುವುದು ಬೇಡ ಎಂದರೆ ಅದರ ಲೇಖನಿ ಮೇಲೆ ಎತ್ತಿ ಮುಂದೆ ಚಲಿಸಲು ನೀವು ಅದಕ್ಕೆ ನಿರ್ದೇಶನ ನೀಡಬಹುದು. ಅದು ಹೇಗೆ ಎಂಬುದನ್ನು ಮುಂದೆ ವಿವರಿಸಲಾಗಿದೆ)
- ಪ್ರತಿಬಾರಿ ನೀವು *ಪಠ್ಯಅಳಿಸು* ಅಥವಾ ಅದರ ಸಂಕ್ಷಿಪ್ತರೂಪವಾದ *ಪ.ಅ* ಎಂಬುದನ್ನು ಬೆರಳಚ್ಚಿಸಿ ಎಂಟರ್ ಕೀಲಿ ಒತ್ತಿದಾಗ ಆದೇಶಕದಲ್ಲಿರುವ ಎಲ್ಲ ಪಠ್ಯ ಅಂದರೆ ಟೆಕ್ಸ್ಟ್ ಅಳಿಸಲ್ಪಡುತ್ತದೆ.

## ರಚಿಸಿದ ಪ್ರೊಸೀಜರ್‌ನ್ನು ಎಡಿಟ್ ಅಂದರೆ ಬದಲಾವಣೆ ಮಾಡಲು ಸಂಪಾದಕವನ್ನು ಬಳಸುವುದು

ಆದೇಶಕದಲ್ಲಿ, *ಆಗಲು ಚೌಕ* ಎಂದು ಬೆರಳಚ್ಚಿಸಿ ಎಂಟರ್ ಕೀಲಿಯನ್ನು ಒತ್ತಿ. 'ಚೌಕ ಈಗಾಗಲೇ ವ್ಯಾಖ್ಯಾನಿಸಲಾಗಿದೆ' ಎಂಬ ಸಂದೇಶವನ್ನು ಪಡೆಯುತ್ತೀರಿ. ಅಂದರೆ, ಈಗಾಗಲೇ ನೀವು ವ್ಯಾಖ್ಯಾನಿಸಿರುವ ಈ ಚೌಕವನ್ನು ನೀವು ಅದೇ ಹೆಸರಿನಲ್ಲಿ ಮತ್ತೆ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಅಗತ್ಯವಿದ್ದರೆ, ಬದಲಾಯಿಸಬಹುದು ಅಂದರೆ ಅದನ್ನು ಎಡಿಟ್ ಮಾಡಬಹುದು.  ಹೀಗೆ ಅದನ್ನು ಎಡಿಟ್ ಮಾಡಲು:
ಮೇನ್ ಮೆನುವಿನಲ್ಲಿರುವ **ಕಡತ** ಎಂಬ ಮೆನು ಐಟಂನ ಮೇಲೆ ಕ್ಲಿಕ್‌ಮಾಡಿ
ಕೆಳಬೀಳುವ ಡ್ರಾಪ್‌ಡೌನ್ ಮೆನುವಿನಲ್ಲಿ **ಸಂಪಾದನೆ...** ಎಂಬ ಐಟಮ್ಮನ್ನು ಕ್ಲಿಕ್‌ಮಾಡಿದರೆ ಈ ಕೆಳಕಂಡ ವಿಂಡೋ ಕಾಣಿಸಿಕೊಳ್ಳುತ್ತದೆ.




ಇದರಲ್ಲಿ *ಚೌಕ* ಎಂಬುದನ್ನು ಒಮ್ಮೆ ಕ್ಲಿಕ್‌ಮಾಡಿ ಸರಿ ಎಂಬುದನ್ನು ಒತ್ತಿ. ನೀವು ವ್ಯಾಖ್ಯಾನಿಸಿರುವ ಚೌಕ ಎಂಬ ಪ್ರೊಸೀಜರ್ ಅಂದರೆ ವಿಧಾನಕವನ್ನು ಬದಲಾಯಿಸಲು ಅವಕಾಶವನ್ನು ನೀಡುವ, 'ಸಂಪಾದಕ' ಎಂದು ಶೀರ್ಷಿಕೆ ಇರುವ, ಈ ಕೆಳಕಂಡ 'ಎಡಿಟರ್ ವಿಂಡೊ' ಕಾಣಿಸಿಕೊಳ್ಳುತ್ತದೆ.

ಗಮನಿಸಿ: ನೀವು ಚೌಕ ಎಂಬ ವಿಧಾನಕದ ಹೆಸರನ್ನು ಕ್ಲಿಕ್‌ಮಾಡದೆ **ಸರಿ** ಎಂಬುದನ್ನು ಒತ್ತಿದರೆ, 'ಕನ್ನಡ ಲೋಗೋ'ಇದನ್ನು ಹೊಸ ವಿಧಾನಕ ಎಂದು ತಿಳಿದು ಕೇವಲ ಆಗಲು ಮತ್ತು ಕೊನೆ ಎಂಬ ಎರಡು ಪದಗಳ ಎರಡು ಸಾಲುಗಳನ್ನು ಮಾತ್ರ ನೀಡಿ ಮಧ್ಯೆ ಆದೇಶದ ಸಾಲನ್ನು ಬೆರಳಚ್ಚಿಸಲು ಅವಕಾಶ ಕಲ್ಪಿಸುತ್ತದೆ.

ಆದೇಶಕದಲ್ಲಿ *ಸಂಪಾದಿಸು "ಚೌಕ* ಎಂದು ಬೆರಳಚ್ಚಿಸಿ ಎಂಟರ್ ಅಥವಾ ಪಾಲಿಸು ಒತ್ತಿದರೂ ಸಹ ಇದೇ ಕೆಳಗಿನ 'ಎಡಿಟರ್ ವಿಂಡೋ' ಕಾಣಿಸಿಕೊಳ್ಳುತ್ತದೆ ಎಂಬುದನ್ನೂ ಸಹ ಗಮನಿಸಿ.




**ಮೇಲಿನ ವಿಂಡೋದಲ್ಲಿ ಕಾಣಿಸುತ್ತಿರುವ ಮೂರು ಸಾಲುಗಳನ್ನು ಗಮನಿಸಿ. ಇದು ಅತ್ಯಂತ ಚಿಕ್ಕದಾದ ಒಂದು ವಿಧಾನಕ.**

- ಮೊದಲ ಸಾಲಿನಲ್ಲಿರುವ **ಆಗಲು** ಎಂಬುದು ಆದೇಶವಾಗಿದೆ. **ಚೌಕ** ಎಂಬುದು ಈ ಪ್ರೊಸೀಜರ್‌ನ ಹೆಸರು.
- ಈ ಪ್ರೊಸೀಜರ್‌ನ್ನು ಚಾಲನೆಗೊಳಿಸಿದರೆ (ಕಾಲ್ ಮಾಡಿದರೆ) 'ಕನ್ನಡ ಲೋಗೋ'ಏನೆಲ್ಲವನ್ನು ಮಾಡಬೇಕು ಎಂಬ ಕ್ರಮವಿಧಿ ಎರಡನೆಯ ಸಾಲಿನಲ್ಲಿ ಇದೆ. ಆ ಆದೇಶಗಳನ್ನು ಜಾರಿಗೊಳಿಸಲು ಅಗತ್ಯವಿರುವ ಇನ್‌ಪುಟ್‌ಗಳೂ ಸಹ ಇವೆ.
- ಕೊನೆಯ ಸಾಲಿನಲ್ಲಿಇರುವ *ಕೊನೆ* ಎಂಬ ಪದವು ಈ ಪ್ರೊಸೀಜರ್ ಕೊನೆಗೊಂಡಿದೆ ಎಂಬುದನ್ನು ಸೂಚಿಸುವ ಆದೇಶವಾಗಿದೆ.

**ಈ ಪ್ರೊಸೀಜರ್‌ನ್ನು ಸ್ವಲ್ಪ ಬದಲಾವಣೆ ಮಾಡಲು, ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ:**

- ಆಗಲು ಚೌಕ ಎಂಬ ಸಾಲಿನ ಮುಂದೆ ಸೂಚಕ ಅಂದರೆ ಕರ್ಸರ್‌ನು ಕ್ಲಿಕ್‌ಮಾಡಿ.
- ಒಂದು ತೆರಪನ್ನು ಅಂದರೆ ಸ್ಪೇಸ್‌ನ್ನು ನೀಡಿ ನಂತರ *:ಉದ್ದ* ಎಂದು ಬೆರಳಚ್ಚಿಸಿ.
- ಪುನ ೪ [ಮುಂದೆ ೧೦೦ ಬಲ ೯೦] ಎಂಬ ಸಾಲಿನಲ್ಲಿ *೧೦೦* ಎಂಬುದರ ಬದಲಾಗಿ *:ಉದ್ದ* ಎಂಬುದನ್ನು ಬೆರಳಚ್ಚಿಸಿ.

ಬದಲಾದ ಈ ಪ್ರೊಸೀಜರ್‌ನ್ನು ಉಳಿಸಲು ಈಗ ಸಂಪಾದಕ ವಿಂಡೋದಲ್ಲಿರುವ **ಕಡತ** ಎಂಬುದರ ಮೇಲೆ ಕ್ಲಿಕ್‌ಮಾಡಿ, ನಂತರ **ಉಳಿಸಿ ನಿರ್ಗಮಿಸು** ಎಂಬುದನ್ನು ಕ್ಲಿಕ್‌ಮಾಡಿ. ಬದಲಾವಣೆಯು ಕಾರ್ಯಾವಕಾಶದಲ್ಲಿ ದಾಖಲಾಗುತ್ತದೆ. ಇದನ್ನೇ ಶಾಶ್ವತವಾಗಿ ಹೊಸ ಕಡತವಾಗಿ ಉಳಿಸಬೇಕು ಎಂದರೆ, ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ:

- ಮೇನ್ ಮೆನುವಿನಲ್ಲಿರುವ **ಕಡತ** ಎಂಬುದನ್ನು ಕ್ಲಿಕ್‌ಮಾಡಿ,
- **ಅಂತೆ ಉಳಿಸು...** ಎಂಬುದನ್ನು ಕ್ಲಿಕ್‌ಮಾಡಿ,
- ಅಗತ್ಯಕ್ಕೆ ತಕ್ಕಂತೆ ಈ ವಿಧಾನಕಕ್ಕೆ ಹೆಸರನ್ನು ನೀಡಿ. ಉದಾಹರಣಗೆ chowka1 ಎಂದು ಬೆರಳಚ್ಚಿಸಿ ಸೇವ್ ಒತ್ತಿ. ಬದಲಾದ ಈ ನಿಮ್ಮ ಪ್ರೊಸೀಜರ್ ಹೊಸ ಹೆಸರಿನಲ್ಲಿ ಶಾಶ್ವತವಾಗಿ ಸೇವ್ ಆಗಿರುತ್ತದೆ.
- ಸೇವ್ ಮಾಡುವಾಗ ಪ್ರಕಟವಾಗುವ ಸಂದೇಶಗಳನ್ನು ಎಚ್ಚರಿಕೆಯಿಂದ ಓದಿ, ಸೂಕ್ತವಾಗಿ ಉತ್ತರಿಸಿ.

**ಗಮನಿಸಿ:** ಕಡತದ ಹೆಸರು ಇಂಗ್ಲಿಷ್‌ನಲ್ಲಿಯೇ ಇರಬೇಕು, ಇದಕ್ಕಾಗಿ ಕಡತದ ಹೆಸರನ್ನು ನೀಡುವಾಗ ನಿಮ್ಮ ಕೀಲಿಮಣೆಯಲ್ಲಿರುವ ಸ್ಕ್ರೋಲ್ ಲಾಕ್ ಕೀಲಿಯನ್ನು ಆಫ್ ಮಾಡಿಕೊಳ್ಳಿ) ಮತ್ತೊಮ್ಮೆ ನೀವು ಕಂಪ್ಯೂಟರ್ ಸ್ವಿಚ್‌ಆನ್ ಮಾಡಿ ಕನ್ನಡ ಲೋಗೋವನ್ನು ಆರಂಭಿಸಿದಾಗ, ಈ ಫೈಲನ್ನು ಲೋಡ್ ಮಾಡಿ ಮತ್ತೆ ಬಳಸಬಹುದು ಹಾಗೂ ಮತ್ತೊಂದು ರೀತಿಯ ಆಕೃತಿ, ಆಕಾರಗಳನ್ನು ರಚಿಸಲು ಇದೇ ಚೌಕ ಎಂಬ ಪ್ರೊಸೀಜರ್‌ನ್ನು ಒಂದು ಸ್ವತಂತ್ರವಾದ ಆದೇಶ ಎಂಬಂತೆ ಬಳಸಬಹುದು. ಹಳೆಯ ವಿಧಾನಕವು ಅಂದರೆ ಬದಲಾವಣೆಗೆ ಮುನ್ನ chowka ಎಂಬ ಹೆಸರಿನಲ್ಲಿಯೇ ಉಳಿದಿರುತ್ತದೆ ಮತ್ತು ಬದಲಾದ ವಿಧಾನಕವು chowka1 ಎಂಬ ಹೊಸ ಹೆಸರಿನಲ್ಲಿ ಸೇವ್ ಆಗಿರುತ್ತದೆ. ಆದ್ದರಿಂದ ನಿಮ್ಮಲ್ಲಿ ಈಗ ಚೌಕವನ್ನು ರಚಿಸಲು ಎರಡು ಬೇರೆ ಬೇರೆ ರೀತಿಯ, ಎರಡು ಬೇರೆ ಬೇರೆ ಹೆಸರಿನ ಪ್ರೊಸೀಜರ್‌ಗಳು ಇರುವುದು ನಿಮಗೆ ನೆನಪಿರಲಿ

**ಚೌಕ ಎಂಬ ವಿಧಾನಕಕ್ಕೆ ಅಂದರೆ ಪ್ರೊಸೀಜರ್‌ಗೆ ಮಾಡಲಾದ ಹೊಸ ಬದಲಾವಣೆಯ ಪರಿಣಾಮವನ್ನು ತಿಳಿಯಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ:**

- ಕಡತ ಕ್ಲಿಕ್‌ಮಾಡಿ, chowka1 ಡಬಲ್‌ಕ್ಲಿಕ್‌ಮಾಡಿ (ಬದಲಾಯಿಸಲಾದ ಹೊಸ ಪ್ರೊಸೀಜರ್ ಕಾರ್ಯಾವಕಾಶಕ್ಕೆ ಮರುಭರಿಕೆ ಆಗುತ್ತದೆ)
- *ತೆ.ಅ* ಬೆರಳಚ್ಚಿಸಿ ಎಂಟರ್ ಕೀಲಿ ಒತ್ತಿ (ಈಗಾಗಲೇ ಪರದೆಯಲ್ಲಿರುವ ಗೆರೆ, ಚಿತ್ರ ಅಥವಾ ಆಕೃತಿಗಳು ಅಳಿಸಲ್ಪಟ್ಟು, ಆಮೆ ಮೂಲನೆಲೆಗೆ ಮರಳುತ್ತದೆ)
- *ಚೌಕ* ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ (ಇದಕ್ಕೆ ಸಾಕಷ್ಟು ಒಳಪಡಿಕೆ ಸಾಲದು – ಎಂಬ ಸಂದೇಶ ಪ್ರಕಟವಾಗುತ್ತದೆ. ಇಲ್ಲಿ ಪ್ರೊಸೀಜರ್‌ನಲ್ಲಿನ :ಉದ್ದ ಎಂಬ ವೇರಿಯಬಲ್‌ಗೆ ಮೌಲ್ಯ ನೀಡಿಲ್ಲ ಆದ್ದರಿಂದ ಈ ಸಂದೇಶ ಪ್ರಕಟವಾಗಿದೆ.)
- *ಚೌಕ ೫೦* ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ (ಚಿಕ್ಕ ಚೌಕ ರಚನೆಯಾಗುತ್ತದೆ. :ಉದ್ದ ಎಂಬ ವೇರಿಯಬಲ್‌ಗೆ ೫೦ ಎಂಬುದು ಮೌಲ್ಯವಾಗಿದೆ)
- *ಚೌಕ ೭೫* ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ (ಸ್ವಲ್ಪ ದೊಡ್ಡದಾದ ಚೌಕ ರಚನೆಯಾಗುತ್ತದೆ)
- ನಂತರ, *ಚೌಕ ೧೦೦* ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ (ಮೇಲಿನದಕ್ಕೂ ಸ್ವಲ್ಪ ದೊಡ್ಡ ಚೌಕವು ಈ ಕೆಳಕಂಡ ಚಿತ್ರದಲ್ಲಿ ಇರುವಂತೆ ರಚನೆಯಾಗುತ್ತದೆ – ಪ್ರತಿ ಬಾರಿ :ಉದ್ದ ಎಂಬ ವೇರಿಯಬಲ್‌ಗೆ ಬೇರೆ ಬೇರೆ ಮೌಲ್ಯವನ್ನು ನೀಡುವ ಮೂಲಕ ವಿವಿಧ ಗಾತ್ರದ ಚೌಕಗಳನ್ನು ರಚಿಸಲಾಗಿದೆ ಎಂಬುದನ್ನು ಗಮನಿಸಿ).



## ನೀವು ಏನೆಲ್ಲವನ್ನೂ ಮಾಡಿದ್ದೀರಿ ಎಂಬುದನ್ನು ಹಿಂದಿರುಗಿ ನೋಡೋಣ

- chowka ಎಂಬ ಕಡತವನ್ನು ರಿಲೋಡ್‌ಮಾಡಿದ್ದೀರಿ, ಪ್ರೊಸೀಜರ್‌ನ್ನು ಎಡಿಟ್ ಅಂದರೆ ಬದಲಾವಣೆ ಮಾಡಲು ಮೇನ್‌ಮೆನು ಬಳಸಿ ಸಂಪಾದಕವನ್ನು ತೆರೆದಿದ್ದೀರಿ. (ಅಥವಾ ನೇರವಾಗಿ ಸಂಪಾದಿಸು "ಚೌಕ ಎಂದು ಆದೇಶಕದಲ್ಲಿ ತಿಳಿಸಿದ್ದೀರಿ)
- ಪುನ ೪ [ಮುಂದೆ ೧೦೦ ಬಲ ೯೦] ಎನ್ನುವ ಸಾಲಿನಲ್ಲಿರುವ ೧೦೦ರ ಬದಲು :ಉದ್ದ ಎಂದು ಸೂಚಿಸುವ ಮೂಲಕ ಪ್ಯಾರಾಮೀಟರ್ ಒಂದನ್ನು ಪ್ರೊಸೀಜರ್‌ನ ಹೊರಗಡೆಯಿಂದಲೇ ನೀಡಲು ಅನುವಾಗುವಂತೆ, *ಆಗಲು ಚೌಕ* ಎಂಬುದರ ನಂತರ *:ಉದ್ದ* ಎಂದು ಸೇರಿಸಲಾಗಿದೆ.
- ಚೌಕ ಎಂದು ಬೆರಳಚ್ಚಿಸಿದಾಗ ಚೌಕವು ರಚನೆಯಾಗದೆ, ಸಂದೇಶವು ಪ್ರಕಟವಾಗಿದೆ. ಇದಕ್ಕೆ ಕಾರಣ ಸೂಕ್ತ ಪ್ಯಾರಾಮೀಟರ್‌ನ್ನು ಹೊರಗಡೆಯಿಂದ ನೀಡಲಾಗಿಲ್ಲ. ಅದೇ ಚೌಕ ೫೦ ಅಥವಾ ಚೌಕ ೧೦೦ ಎಂದು ನೀಡಿದಾಗ, ಸೂಕ್ತ ಗಾತ್ರದ ಚೌಕಗಳು ರಚನೆಯಾಗಿವೆ.
- ಮೊದಲಿಗೆ ಚೌಕ ೫೦, ನಂತರ ಚೌಕ ೭೫ ತದನಂತರ ಚೌಕ ೧೦೦ ಎಂದು ಆದೇಶಿಸುವ ಮೂಲಕ ಪ್ರತಿಬಾರಿಯೂ ಚೌಕ ಎಂಬುದಕ್ಕೆ ೫೦, ೭೫ ಮತ್ತು ೧೦೦ ಎಂಬ ಇನ್‌ಪುಟ್‌ನ್ನು ನೀಡಿ ನಮಗೆ ಅಗತ್ಯವಿರುವ ಚೌಕದ ಗಾತ್ರವನ್ನು ತಿಳಿಸಿ ಬೇರೆ ಬೇರೆ ಗಾತ್ರದ ಚೌಕವನ್ನು ರಚಿಸಲು ಒಂದೇ ಪ್ರೊಸೀಜರ್‌ನ್ನು ಬಳಸಲಾಗಿದೆ.

## ಸಿದ್ಧ ಪ್ರೊಸೀಜರ್‌ನ್ನು ಬಳಸಿ ಹೊಸ ಆಕೃತಿಗಳ ರಚನೆ

ಆದೇಶಕದಲ್ಲಿ *ಪುನ ೩೬ [ಚೌಕ ಬಲ ೧೦]* ಎಂದು ಬೆರಚ್ಚಿಸಿ ಎಂಟರ್ ಕೀಲಿ ಒತ್ತಿ. ಪರಿಣಾಮ ನೋಡಿ. (ಚೌಕ : ಈ ಆದೇಶ ನನಗೆ ಗೊತ್ತಿಲ್ಲ – ಎಂಬ ಸಂದೇಶ ಪ್ರಕಟವಾದರೆ, ಚೌಕ ಎಂಬ ವಿಧಾನಕ ಅಂದರೆ ಪ್ರೊಸೀಜರ್ ಲೋಡ್ ಆಗಿಲ್ಲ. ಮೇನ್ ಮೆನುನಲ್ಲಿರುವ ತೆಗೆ ಎಂಬುದನ್ನು ಕ್ಲಿಕ್‌ಮಾಡಿ, ನಂತರ, chowka ಎಂಬ ಕಡತವನ್ನು ಆಯ್ಕೆಮಾಡಿಕೊಂಡು ಮತ್ತೆ *ಪುನ ೩೬ [ಚೌಕ ಬಲ ೧೦]* ಎಂಬ ಆದೇಶ ನೀಡಬೇಕು.) ಈ ಕೆಳಕಂಡ ವಿಂಡೋದಲ್ಲಿರುವಂತೆ ರಂಗೋಲಿ ರಚನೆಯಾಗುತ್ತದೆ.




ಈಗ ಇದೇ ಆಕೃತಿ ರಚನೆಗಾಗಿ ರಂಗೋಲಿ ಎಂಬ ಒಂದು ವಿಧಾನಕವನ್ನು ಬರೆಯಬಹುದು ಮತ್ತು ರಂಗೋಲಿ ಎಂದು ಬೆರಳಚ್ಚುಮಾಡಿದರೆ, ಈ ಆಕೃತಿ ರೂಪುಗೊಳ್ಳುವಂತೆ ಮಾಡಬಹುದು. ಇದಕ್ಕಾಗಿ ಕೆಳಕಂಡ ಕ್ರಮಗಳನ್ನು ಅನುಸರಿಸಿ:

- ಮೇನ್ ಮೆನುವಿನಲ್ಲಿರುವ ಕಡತ ಕ್ಲಿಕ್‌ಮಾಡಿ,
- ಸಂಪಾದನೆ... ಎಂಬುದನ್ನು ಕ್ಲಿಕ್‌ಮಾಡಿ, (ಸಂಪಾದಕವು ತೆರೆದುಕೊಳ್ಳುತ್ತದೆ).

- ಅಲ್ಲಿ ಚೌಕ ಎಂಬುದರ ಮೇಲೆ ಕ್ಲಿಕ್‌ಮಾಡಿ. (ಚೌಕದ ವಿಧಾನಕವು ಸಂಪಾದಕದಲ್ಲಿ ತೆರೆದುಕೊಳ್ಳುತ್ತದೆ) ಅದರ ಅಡಿಯಲ್ಲಿ ಈ ಕೆಳಕಂಡಂತೆ ಬೆರಳಚ್ಚು ಮಾಡಿ, (ಹೀಗೆ ಹೊಸ ವಿಧಾನವೊಂದನ್ನು ರಚಿಸಿರಿ)

ಆಗಲು ರಂಗೋಲಿ
ಪುನ ೩೬ [ಚೌಕ ಬಲ ೧೦]
ಕೊನೆ

ಈಗ ನೀವು *ರಂಗೋಲಿ* ಎಂಬ ಹೆಸರಿನ ಒಂದು ವಿಧಾನಕವನ್ನು ರಚಿಸಿದ್ದೀರಿ. ಈಗ ಆದೇಶಕದಲ್ಲಿ ನೇರವಾಗಿ ರಂಗೋಲಿ ಎಂದು ಬೆರಳಚ್ಚಿಸುವ ಮೂಲಕ ಆಕೃತಿಯನ್ನು ನೀವು ರಚಿಸಬಹುದು. ಇದಕ್ಕಾಗಿ, ಮೊದಲು ಉಳಿಸಿ ನಿರ್ಗಮಿಸು ಎಂಬುದನ್ನು ಕ್ಲಿಕ್‌ಮಾಡಿ ಸಂಪಾದಕದಿಂದ ಹೊರಬನ್ನಿ. ನಂತರ, ಆದೇಶಕದಲ್ಲಿ ಸುಮ್ಮನೆ *ರಂಗೋಲಿ* ಎಂದು ಬೆರಳಚ್ಚಿಸಿ, ಎಂಟರ್ ಕೀಲಿ ಒತ್ತಿ. ಮೇಲಿನ ಚಿತ್ರದಲ್ಲಿ ತೋರಿಸಿರುವಂತೆ ರಂಗೋಲಿಯು ಮೂಡುತ್ತದೆ.

**ರಂಗೋಲಿಯ ರಚನೆಯ ಕ್ರಮವನ್ನು ಅಭ್ಯಸಿಸಲು ಅದರ ರಚನೆಯನ್ನು ನಿಧಾನಗೊಳಿಸಲು ತಾಳು ಆದೇಶವನ್ನು ಬಳಸಿ. ಇದಕ್ಕಾಗಿ ಮುಂದಿನ ಕ್ರಮಗಳನ್ನು ಅನುಸರಿಸಿ:**

- ತೆರೆಅಳಿಸು ಅಥವಾ ತೆ.ಅ ಮಾಡಿ (ಈಗಾಗಲೇ ಪರದೆಯಲ್ಲಿ ಚಿತ್ರ, ಆಕಾರ ಇದ್ದರೆ ಅಳಿಸಲ್ಪಡುತ್ತದೆ)
- ಎಲ್ಲಸಂಸು ಎಂದು ಬೆರಳಚ್ಚಿಸಿ ಎಂಟರ್ ಅಥವಾ ಪಾಲಿಸು ಒತ್ತಿ (ಎಲ್ಲಸಂಸು – ಎಂಬುದು ಎಲ್ಲ ಪ್ರೊಸೀಜರ್‌ಗಳನ್ನು ಸಂಪಾದಿಸು ಎಂಬ ಅರ್ಥವನ್ನು ಹೊಂದಿರುವ ಒಂದು ಆದೇಶ).
- ರಂಗೋಲಿ ಎಂಬ ಪ್ರೊಸೀಜರ್ ಸಾಲಿನಲ್ಲಿರುವ ಬಲ ೯೦ ಎಂಬುದರ ನಂತರ ತಾಳು ೨೦ ಎಂದು ಬೆರಳಚ್ಚಿಸಿ, ಉಳಿಸಿ, ನಿರ್ಗಮಿಸಿ
- ರಂಗೋಲಿ ಎಂದು ಆದೇಶಕದಲ್ಲಿ ಬೆರಳಚ್ಚಿಸಿ ಎಂಟರ್ ಅಥವಾ ಪಾಲಿಸು ಒತ್ತಿ (ತಾಳು ಆದೇಶದ ಅನ್ವಯ ಪ್ರತಿಬಾರಿ ಚೌಕದ ರಚನೆಯಾದ ನಂತರ ಆಮೆಯು ಸೆಕೆಂಡಿನ ೨೦ ಭಾಗದಷ್ಟು ಕಾಲ ನಿಧಾನಿಸಿ ನಂತರದ ಮತ್ತೊಂದು ಚೌಕವನ್ನು ರಚಿಸುತ್ತದೆ. ಇದು ನಿರಂತರವಾಗಿ ೩೬ ಚೌಕಗಳ ರಚನೆಗೂ ಅನ್ವಯಿಸುತ್ತದೆ.)

ಅಧ್ಯಾಯ – ೪

# ಆಕೃತಿಗಳ ರಚನೆ

(ಅಭ್ಯಾಸದ ಮೂರನೆಯ ಸೆಷನ್)

ಕನ್ನಡ ಲೋಗೋದಲ್ಲಿರುವ ಆಮೆಯು ಆದೇಶ ಮತ್ತು ಇನ್‌ಪುಟ್‌ಗಳನ್ನು ಬಳಸಿ ಹೇಗೆ ಈ ಗೆರೆಗಳನ್ನು ಬರೆಯುತ್ತದೆ ಮತ್ತು ಹೀಗೆ ಗೆರೆಗಳನ್ನು ಎಳೆಯುವ ಮೂಲಕ ವಿವಿಧ ಆಕೃತಿಗಳನ್ನು ಆಮೆಯು ಹೇಗೆ ರಚಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಅವಶ್ಯಕ.

ಆಮೆಯು ಬಹಳ ವೇಗವಾಗಿ ಚಲಿಸುವ ಮೂಲಕ ಗೆರೆಗಳನ್ನು ಎಳೆದು ಆಕಾರಗಳನ್ನು ರಚಿಸುತ್ತದೆ. ಅಲ್ಲಲ್ಲಿಯೇ ಆಮೆಯನ್ನು ತಡೆದು ನಿಲ್ಲಿಸುವ ಮೂಲಕ ಅದರ ಚಲನವಲನವನ್ನು ಗಮನಿಸಲು ಸಾಧ್ಯವಾಗುವಂತೆ ಒಂದು ವಿಶೇಷ ಆದೇಶವಿದೆ. ಅದೇ *ತಾಳು* ಎಂಬ ಆದೇಶ. *ತಾಳು* ಎಂದು ಹೇಳಿದರೆ ಸಾಲದು ಎಷ್ಟು ಸಮಯ ತಾಳಬೇಕು ಎಂಬುದನ್ನೂ ಸಹ ಆಮೆಗೆ ಇನ್‌ಪುಟ್ ನೀಡುವ ಮೂಲಕ ಸೂಚಿಸಬೇಕು. ಈ ಆದೇಶ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ನೋಡೋಣ.

ಈಗಾಗಲೇ ನಿಮಗೆ ತಿಳಿದಿರುವ, ಚೌಕವನ್ನು ರಚಿಸುವ ಆದೇಶದ ಈ ಸಾಲನ್ನು ಗಮನಿಸಿ:

*ಪುನ ೪ [ಮುಂದೆ ೧೦೦ ಬಲ ೯೦]*

ಈ ಸಾಲನ್ನು ಆದೇಶಕದಲ್ಲಿ ಬೆರಳಚ್ಚಿಸಿ ಎಂಟರ್ ಕೀಲಿ ಒತ್ತಿದ ತಕ್ಷಣವೇ ಚೌಕವು ರಚನೆಯಾಗುತ್ತದೆ. ಈ ಸಾಲಿನಲ್ಲಿ ನಾವು ನೀಡಿರುವ ಆದೇಶವನ್ನು ಆಮೆಯು ಹೇಗೆ ಪಾಲಿಸುತ್ತದೆ ಎಂಬುದನ್ನು ಮೊದಲಿಗೆ ತಿಳಿದುಕೊಳ್ಳೋಣ. ಈ ಸಾಲಿನಲ್ಲಿ *ಪುನ ೪* ಎಂಬುದು ನಂತರ ಸೂಚಿಸಿರುವ ಆದೇಶದ ಪಟ್ಟಿಯನ್ನು, ಅಂದರೆ ಆವರಣ ಚಿಹ್ನೆಯೊಳಗಿರುವ ಆದೇಶಗಳನ್ನು ೪ ಬಾರಿ ಪುನರಾವರ್ತಿಸು ಎಂದು ಸೂಚಿಸುತ್ತದೆ.

ತೆ.ಅ ಮಾಡಿ ಮತ್ತೆ ಅದೇ ಸಾಲನ್ನು, ಅಂದರೆ, ಪುನ ೪ [ಮುಂದೆ ೧೦೦ ಬಲ ೯೦] ಎಂಬುದನ್ನು ಆದೇಶಕ ವಿಂಡೋದಿಂದ ಆಯ್ಕೆಮಾಡಿಕೊಳ್ಳಿ. ಆ ಸಾಲಿನಲ್ಲಿ *ಬಲ ೯೦* ಎಂಬುದರ ನಂತರ ಒಂದು ತೆರಪನ್ನು ನೀಡಿ *ತಾಳು ೬೦* ಎಂದು ಬೆರಳಚ್ಚಿಸಿ ಆದೇಶದ ಸಾಲು ಈಗ ಹೀಗಿರುತ್ತದೆ: *ಪುನ ೪ [ಮುಂದೆ ೧೦೦ ಬಲ ೯೦ ತಾಳು ೬೦]* ಎಂಟರ್ ಕೀಲಿ ಒತ್ತಿ. ಮೊದಲಿಗೆ ಆಮೆಯು ೧೦೦ ಹೆಜ್ಜೆಗಳಷ್ಟು ಮುಂದೆ ಸಾಗಿ ೯೦ ಡಿಗ್ರಿಗಳಷ್ಟು ಬಲಕ್ಕೆ ತಿರುಗುತ್ತದೆ. ನಂತರ ತಾಳು ಆದೇಶವನ್ನು ಪಾಲಿಸಲು ಒಂದು ಸೆಕೆಂಡ್ ಕಾಲ 'ಕಾಯುತ್ತದೆ'. ತದನಂತರ *ಪುನ ೪* ಎಂಬ ಆದೇಶದ ಅನ್ವಯ ಎರಡನೆಯ ಪ್ರಯತ್ನವಾಗಿ *ಮುಂದೆ ೧೦೦ ಬಲ ೯೦* ಎಂಬ ಎರಡು ಆದೇಶಗಳನ್ನು ಪಾಲಿಸುತ್ತದೆ. ಮತ್ತೆ ತಾಳು ಆದೇಶದ ಅನ್ವಯ ಸೂಕ್ತವಾಗಿ ಕಾಯುತ್ತದೆ. ಹೀಗೆ ೪ ಬಾರಿ ಪುನರಾವರ್ತನೆ ನಂತರ ಚೌಕ ರಚನೆಯಾಗುತ್ತದೆ. ಪ್ರತಿಬಾರಿ ತಾಳು ಆದೇಶ ಪಾಲಿಸುವಾಗ ಒಂದು ಸೆಕೆಂಡ್ ಕಾಲ ಆಮೆಯು ಕಾಯುವುದನ್ನು ನೀವು ಗಮನಿಸಬಹುದು.

ಗಮನಿಸಿ: ತಾಳು ಎಂಬ ಆದೇಶಕ್ಕೆ ಹೆಚ್ಚಿನ ಮೌಲ್ಯದ ಸಂಖ್ಯೆಯನ್ನು ನೀಡುವ ಮೂಲಕ ಕಾಯುವ ಅಂದರೆ ವಿಳಂಬ ಕಾಲವನ್ನು ಹೆಚ್ಚಿಸಬಹುದು. ಕನ್ನಡ ಲೋಗೋದ ಆಮೆಯು ವಿವಿಧ ರೀತಿಯ ಆದೇಶಗಳನ್ನು ಅನುಕ್ರಮವಾಗಿ ಹೇಗೆ ಅನುಷ್ಠಾನಕ್ಕೆ ತರುತ್ತದೆ ಎಂಬುದನ್ನು ತಿಳಿದುಕೊಳ್ಳಲು ಈ ತಾಳು ಆದೇಶವು ಬಹಳ ಉಪಯುಕ್ತವಾಗಿದೆ. ವಿವಿಧ ಆಕಾರಗಳನ್ನು ರಚಿಸುವಾಗ ಅಗತ್ಯವಿರುವ ಎಡೆಗಳಲ್ಲಿ ಈ ತಾಳು ಆದೇಶವನ್ನು ನೀಡುವ ಮೂಲಕ, ಆ ಆಕಾರವು ಹೇಗೆ ರಚನೆಯಾಗುತ್ತದೆ ಎಂಬುದನ್ನು ನಾವು ಗಮನಿಸಬಹುದು.

**ಬಹುಮುಖಿಗಳು ಅಂದರೆ ಪಾಲಿಗನ್‌ಗಳ ರಚನೆ**

ಕನ್ನಡ ಲೋಗೋವನ್ನು ಬಳಸುತ್ತಿದ್ದರೆ, ಮೊದಲಿಗೆ, ಕಡತ->ನಿರ್ಗಮಿಸು ಒತ್ತುವ ಮೂಲಕ ಕನ್ನಡ ಲೋಗೋದಿಂದ ಹೊರಬನ್ನಿ. ಮತ್ತೆ ಕನ್ನಡ ಲೋಗೋವನ್ನು ಆರಂಭಿಸಿ. ನಂತರ, ಕಡತ->ತೆಗೆ ಕ್ಲಿಕ್‌ಮಾಡಿ. Chowka ಎಂಬ ಕಡತದ ಮೇಲೆ ಡಬಲ್ ಕ್ಲಿಕ್‌ಮಾಡಿ. ತದನಂತರ, **ಕಡತ->ಸಂಪಾದನೆ** ಕ್ಲಿಕ್‌ಮಾಡಿ. ಸಂಪಾದಕವು ತೆರೆದುಕೊಳ್ಳುತ್ತದೆ. ಅದರಲ್ಲಿ ಎಲ್ಲಾ ಎಂಬುದನ್ನು ಕ್ಲಿಕ್‌ಮಾಡಿ. ಅಲ್ಲಿ ಒಂದಕ್ಕಿಂತ ಹೆಚ್ಚಿನ ಪ್ರೊಸೀಜರ್‌ಗಳು ಇರಬಹುದು. ಅವುಗಳ ಅಡಿಯಲ್ಲಿ ಒಂದು ಸಾಲಿನ ಸ್ಪೇಸ್ ಬಿಟ್ಟು ಈ ಕೆಳಕಂಡ ಮೂರು ಪ್ರೊಸೀಜರ್‌ಗಳನ್ನು ಇಲ್ಲಿ ತೋರಿಸಿರುವಂತೆ ಯಥಾವತ್ತು ಬೆರಳಚ್ಚಿಸಿ (ಎಚ್ಚರಿಕೆ: ಬೆರಳಚ್ಚಿನಲ್ಲಿ ಸ್ವಲ್ಪವೇ ಆದರೂ ವ್ಯತ್ಯಾಸ ಇದ್ದಲ್ಲಿ, ಈ ಪ್ರೊಸೀಜರ್‌ಗಳು ಕೆಲಸ ನಿರ್ವಹಿಸುವುದಿಲ್ಲ. ಬದಲಾಗಿ ದೋಷ ಸಂದೇಶಗಳನ್ನು ಪ್ರಕಟಿಸುತ್ತವೆ ಎಂಬುದನ್ನು ನೆನಪಿಟ್ಟುಕೊಳ್ಳಿ)

ಆಗಲು ತ್ರಿಕೋನ :ಉದ್ದ

ಪುನ ೩ [ಮು :ಉದ್ದ ಬ ೧೨೦]

ಕೊನೆ

ಆಗಲು ಚೌಕ :ಉದ್ದ

ಪುನ ೪ [ಮು :ಉದ್ದ ಬ ೯೦]

ಕೊನೆ

ಆಗಲು ಪೆಂಟಗನ್ :ಉದ್ದ

ಪುನ ೫ [ಮು :ಉದ್ದ ಬ ೭೨]

ಕೊನೆ

ಮೇಲಿನದನ್ನು ಎಚ್ಚರಿಕೆಯಿಂದ ಬೆರಳಚ್ಚಿಸಿದ ನಂತರ, ಸಂಪಾದಕ ವಿಂಡೋದಲ್ಲಿನ **ಕಡತ -> ಉಳಿಸಿ ನಿರ್ಗಮಿಸು** ಎಂಬುದನ್ನು ಕ್ಲಿಕ್‌ಮಾಡಿ, ಸಂಪಾದಕದಿಂದ ಹೊರಬನ್ನಿ. ಆದೇಶಕದಲ್ಲಿ ಕ್ರಮವಾಗಿ ಈ ಕೆಳಕಂಡಂತೆ ಆದೇಶಗಳನ್ನು ನೀಡಿ ಮತ್ತು ಪರದೆಯಲ್ಲಿ ರಚನೆಯಾಗುವ ಆಗುವ ಆಕೃತಿಗಳನ್ನು ಗಮನಿಸಿ. ಈ ಪ್ರೊಸೀಜರ್‌ಗಳ ರಚನೆಯಲ್ಲಿ *ಮುಂದೆ* ಎಂಬ ಆದೇಶ ಮತ್ತು *ಬಲ* ಎಂಬ ಆದೇಶಗಳು ಕ್ರಮವಾಗಿ *ಮು* ಮತ್ತು *ಬ* ಎಂದು ಸಂಕ್ಷಿಪ್ತವಾಗಿರುವುದನ್ನು ಗಮನಿಸಿ. 'ಕನ್ನಡ ಲೋಗೋ'ಈ ಸಂಕ್ಷಿಪ್ತ ರೂಪಗಳನ್ನು ಅರ್ಥವಾಡಿಕೊಳ್ಳುತ್ತದೆ. ಬೆರಳಚ್ಚಿನ ಶ್ರಮ ಮತ್ತು ಕಾಲವನ್ನು ಉಳಿಸಲು ಕನ್ನಡ ಲೋಗೋದಲ್ಲಿನ ಅನೇಕ ಆದೇಶಗಳಿಗೆ ಸಂಕ್ಷಿಪ್ತರೂಪಗಳನ್ನೂ ಸಹ ನೀಡಲಾಗಿದೆ. ಹೆಚ್ಚಿನ ವಿವರಗಳಿಗೆ 'ಸಹಾಯ'ವನ್ನು ನೋಡಿ.

- ತ್ರಿಕೋನ ೧೦೦ (ಎಂಟರ್ ಕೀಲಿ ಒತ್ತಿದ ನಂತರ, ಪರದೆಯಲ್ಲಿ ತ್ರಿಕೋನಾಕಾರ ರಚನೆಯಾಗುತ್ತದೆ. ಅದರ ಪ್ರತಿಯೊಂದು ಬದಿಯ ಅಂದರೆ ಭುಜದ ಉದ್ದ ೧೦೦ ಆಮೆ ಹೆಜ್ಜೆಗಳಷ್ಟು ಇದೆ)
- ಚೌಕ ೨೦೦ (ಎಂಟರ್ ಕೀಲಿ ಒತ್ತಿದ ನಂತರ, ಪರದೆಯಲ್ಲಿ ಚೌಕ ರಚನೆಯಾಗುತ್ತದೆ. ಅದರ ಪ್ರತಿಯೊಂದು ಬದಿಯ ಅಂದರೆ ಭುಜದ ಉದ್ದ ೨೦೦ ಆಮೆ ಹೆಜ್ಜೆಗಳಷ್ಟು ಇದೆ)
- ಪೆಂಟಗನ್ ೭೫ (ಎಂಟರ್ ಕೀಲಿ ಒತ್ತಿದ ನಂತರ, ಪರದೆಯಲ್ಲಿ ಪೆಂಟಗನ್ ಅಂದರೆ ಪಂಚಭುಜಾಕೃತಿ ರಚನೆಯಾಗುತ್ತದೆ. ಅದರ ಪ್ರತಿಯೊಂದು ಭುಜದ ಉದ್ದ ೭೫ ಆಮೆ ಹೆಜ್ಜೆಗಳಷ್ಟು ಇದೆ)

| |
|---|
| ಗಮನಿಸಿ: ತ್ರಿಕೋನ, ಚೌಕ ಮತ್ತು ಪೆಂಟಗನ್ ಈ ಪ್ರೊಸೀಜರ್‌ಗಳಲ್ಲಿ ಪುನ ಎಂಬುದರ ಪಕ್ಕದಲ್ಲಿ ಇರುವ ಸಂಖ್ಯೆ ಎಷ್ಟು ಭುಜಗಳನ್ನು ಉಳ್ಳ ಆಕಾರ ರಚಿಸಬೇಕು ಎಂಬುದನ್ನು ಸೂಚಿಸುತ್ತಿದೆ. ಅಂದರೆ, ತ್ರಿಕೋನದಲ್ಲಿ ೩ ಭುಜಗಳು, ಚೌಕದಲ್ಲಿ ೪ ಭುಜಗಳು ಮತ್ತು ಪೆಂಟಗನ್‌ನಲ್ಲಿ ೫ ಭುಜಗಳು. ಹಾಗೆಯೇ, ಈ ವಿವಿಧ ಆಕಾರಗಳನ್ನು ರಚಿಸುವಾಗ ಆಮೆಯು ಎಷ್ಟು ಡಿಗ್ರಿಗಳಷ್ಟು (ಕೋನ) ಬಲಕ್ಕೆ ತಿರುಗಬೇಕು ಎಂಬುದನ್ನು ಗಮನಿಸಿ. ಪ್ರತಿಯೊಂದೂ ಆಕಾರದಲ್ಲಿಯೂ ಸಹ ಈ ಕೋನವು ೩೬೦ನ್ನು ಮುಖಗಳ ಸಂಖ್ಯೆಯಿಂದ ಭಾಗಿಸಿದಾಗ ಬರುವ ಸಂಖ್ಯೆಗೆ ಸಮನಾಗಿದೆ ಎಂಬುದನ್ನು ಗಮನಿಸಿ. ಉದಾ: ತ್ರಿಕೋನ ೩೬೦/೩=೧೨೦, ಚೌಕ ೩೬೦/೪=೯೦ ಮತ್ತು ಪೆಂಟಗನ್ ೩೬೦/೫=೭೨. |

ವಿವಿಧ ಭುಜಗಳ ಆಕಾರಗಳನ್ನು ರಚಿಸಲು, ಒಂದು ಸಾಮಾನ್ಯ ಪ್ರೊಸೀಜರ್‌ನ್ನು ಬರೆದರೆ ಹೇಗೆ? ಇದಕ್ಕಾಗಿ ಪ್ಯಾರಾಮೀಟರ್‌ಗಳನ್ನು ನೀಡುವ ಮೂಲಕ ಈ ಕೆಳಕಂಡಂತೆ ಒಂದು ಪ್ರೊಸೀಜರ್‌ನ್ನು ಬರೆಯಬಹುದು.

ಆಗಲು ಬಹುಮುಖಿ :ಉದ್ದ :ಮುಖಗಳು
ಪುನ :ಮುಖಗಳು [ಮು :ಉದ್ದ ಬ ೩೬೦/:ಮುಖಗಳು ತಾಳು ೬೦]
ಕೊನೆ

**ಇದನ್ನು ಬರೆದು ಉಳಿಸಿದ ನಂತರ, ಕ್ರಮವಾಗಿ ಇವುಗಳನ್ನು ಮಾಡಿ:**

*ಬಹುಮುಖಿ ೧೦೦ ೩* ಎಂದು ಆದೇಶಿಸಿ, ಎಂಟರ್ ಕೀಲಿ ಒತ್ತಿ (ಒಂದು ತ್ರಿಕೋನಾಕಾರ ರಚನೆಯಾಗುತ್ತದೆ.)
*ಬಹುಮುಖಿ ೧೦೦ ೪* ಎಂದು ಆದೇಶಿಸಿ, ಎಂಟರ್ ಕೀಲಿ ಒತ್ತಿ (ಒಂದು ಚೌಕಾಕಾರ ರಚನೆಯಾಗುತ್ತದೆ.)
*ಬಹುಮುಖಿ ೧೦೦ ೫* ಎಂದು ಆದೇಶಿಸಿ, ಎಂಟರ್ ಕೀಲಿ ಒತ್ತಿ (ಒಂದು ಪಂಚಭುಜಾಕಾರ ರಚನೆಯಾಗುತ್ತದೆ.)
*ಬಹುಮುಖಿ ೧೦೦ ೬* ಎಂದು ಆದೇಶಿಸಿ, ಎಂಟರ್ ಕೀಲಿ ಒತ್ತಿ (ಒಂದು ಷಡ್ಭುಜಾಕಾರ ರಚನೆಯಾಗುತ್ತದೆ.)

ಹೀಗೆ, ಒಂದೇ ಪ್ರೊಸೀಜರ್‌ಗೆ ಭುಜದ ಉದ್ದ ಮತ್ತು ಅಗತ್ಯವಿರುವ ಭುಜಗಳ ಸಂಖ್ಯೆ ಇವುಗಳನ್ನು ಪ್ಯಾರಾಮೀಟರ್‌ಗಳಾಗಿ ನೀಡುವ ಮೂಲಕ ವಿವಿಧ ಗಾತ್ರದ, ವಿವಿಧ ಭುಜಗಳ ಆಕೃತಿಗಳನ್ನು ರಚಿಸಬಹುದು.

ಬಹುಮುಖಿ ಹೆಸರಿನ ಪ್ರೊಸೀಜರ್‌ನ ಕೆಳಗೆಯೇ, ಈ ಮುಂದಿನ ಪ್ರೊಸೀಜರ್‌ನ್ನು ಬೆರಳಚ್ಚಿಸಿ, ಉಳಿಸಿ ನಿರ್ಗಮಿಸಿ.

ಆಗಲು ಚಿತ್ರ :ಮುಖಗಳು
ಪುನ :ಮುಖಗಳು [ಬಹುಮುಖಿ ೧೦೦ :ಮುಖಗಳು ನೇಮಿಸು "ಮುಖಗಳು :ಮುಖಗಳು+೧]
ಕೊನೆ

ನಂತರ, ಆದೇಶಕದಲ್ಲಿ ಹೀಗೆ ಬೆರಳಚ್ಚಿಸಿ:

ಚಿತ್ರ ೩ (ಎಂಟರ್ ಕೀಲಿ ಒತ್ತಿ)

ಈಗ ಚಿತ್ರ ರಚನೆಯು ಹೇಗಾಗುತ್ತಿದೆ ಎಚ್ಚರಿಕೆಯಿಂದ ಗಮನಿಸಿ. ಮೊದಲಿಗೆ ಮೂರು ಭುಜಗಳ ತ್ರಿಕೋನ, ನಂತರ, ನಾಲ್ಕು ಭುಜಗಳ ಚೌಕ, ತದನಂತರ ಐದು ಭುಜಗಳ ಪೆಂಟಗನ್, ಈ ರೀತಿಯಲ್ಲಿ ಮೂರು ಆಕೃತಿಗಳನ್ನು ರಚಿಸುತ್ತದೆ. *ಚಿತ್ರ ೪*, *ಚಿತ್ರ ೫* ಹೀಗೆ ಬೇರೆ ಬೇರೆ ಮೌಲ್ಯಗಳ ಇನ್‌ಪುಟ್ ನೀಡಿ ಎಂಟರ್ ಒತ್ತಿ. ಚಿತ್ರಗಳ ರಚನೆಯಲ್ಲಿ ಹೇಗೆ ಭುಜಗಳ ಸಂಖ್ಯೆಯು ಕ್ರಮೇಣ ಹೆಚ್ಚಾಗುತ್ತವೆ ಹಾಗೂ ಆಕೃತಿಗಳ ಸಂಖ್ಯೆಯೂ ಸಹ ಅದಕ್ಕೆ ಅನುಗುಣವಾಗಿ ಇರುತ್ತವೆ ಎಂಬುದನ್ನು ಗಮನಿಸಿ.

**ಗಮನಿಸಿ:** ತ್ರಿಕೋನ, ಚೌಕ, ಪೆಂಟಗನ್ ಈ ಪ್ರೊಸೀಜರ್‌ಗಳು ಮತ್ತು ಅವುಗಳ ಪರಿಷ್ಕೃತ ರೂಪವಾದ ಬಹುಮುಖಿ ಪ್ರೊಸೀಜರ್ ನಡುವ ಪರಸ್ಪರ ಇರುವ ಸಂಬಂಧ, ಮಾಡಿರುವ ಬದಲಾವಣೆಗಳು ಮತ್ತು ಅದರ ಪರಿಣಾಮ ಇವುಗಳನ್ನು ಎಚ್ಚರಿಕೆಯಿಂದ ಗಮನಿಸಿ. ಹಾಗೆಯೇ, ಬಹುಮುಖಿ ಮತ್ತು ಚಿತ್ರ ಈ ಪ್ರೊಸೀಜರ್‌ಗಳನ್ನೂ ಸಹ ಹೋಲಿಸಿ ನೋಡಿ. ಈ ಮುಂದಿನ ವಿವರಣೆಯಿಂದ ಇವುಗಳನ್ನು ನೀವು ಇನ್ನಷ್ಟು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ.

## ‘ಕನ್ನಡ ಲೋಗೋ’ಆದೇಶಗಳನ್ನು ಈ ಕ್ರಮದಲ್ಲಿ ಅನುಷ್ಠಾನಗೊಳಿಸುತ್ತದೆ

*ಪುನ ೪ [ಮುಂದೆ ೧೦೦ ಬಲ ೯೦]* ಈ ಆದೇಶದ ಸಾಲನ್ನು ಗಮನಿಸಿ. ಈ ಸಾಲು ಅನುಷ್ಠಾನಗೊಂಡಲ್ಲಿ ಒಂದು ಚೌಕ ರಚನೆಯಾಗುತ್ತದೆ ಎಂಬುದನ್ನು ನೀವು ಈಗಾಗಲೇ ತಿಳಿದಿದ್ದೀರಿ. ಮೊದಲಿಗೆ, ‘ಕನ್ನಡ ಲೋಗೋ’ಮುಂದೆ ೧೦೦ ಬಲ ೯೦ ಎಂಬ ಎರಡು ಆದೇಶಗಳನ್ನು ಒಂದರ ನಂತರ ಮತ್ತೊಂದರಂತೆ ಪಾಲಿಸುತ್ತದೆ. ನಂತರ *ಪುನ ೪* ಎಂಬುದನ್ನು ಓದಿಕೊಂಡು, ಮತ್ತೆ ಅದೇ ಸಾಲುಗಳನ್ನು ಅಂದರೆ ಚೌಕಾವರಣದೊಳಗಿರುವ ಆದೇಶಗಳನ್ನು ಮೂರು ಬಾರಿ ಪಾಲಿಸುತ್ತದೆ. ಒಟ್ಟು ನಾಲ್ಕು ಬಾರಿ ಆದೇಶಗಳನ್ನು ಪಾಲಿಸಿದ ನಂತರ ಆಮೆಯು ತನ್ನ ಸ್ವಸ್ಥಾನದಲ್ಲಿ (*ಮೂಲನೆಲೆ*) ನಿಲ್ಲುತ್ತದೆ.

*ಪುನ ೩೬ [ಪುನ ೪ [ಮುಂದೆ ೧೦೦ ಬಲ ೯೦]* ಬಲ ೧೦] ಎಂಬ ಆದೇಶದಲ್ಲಿ ‘ಕನ್ನಡ ಲೋಗೋ’ ಮೊದಲಿಗೆ ಮೊದಲ ಒಳಚೌಕಾವರಣದಲ್ಲಿನ ಆದೇಶಗಳನ್ನು ನಾಲ್ಕುಬಾರಿ ಪುನರಾವರ್ತಿಸುತ್ತದೆ, ನಂತರ, ಬಲ ೧೦ ಎಂಬ ಆದೇಶ ಪಾಲಿಸುತ್ತದೆ. ಆ ನಂತರ ಹೊರ ಚೌಕಾವರಣವನ್ನು ಬಿಟ್ಟು ಹೊರಬಂದು ಪುನ ೩೬ ಎಂಬುದನ್ನು ಓದಿಕೊಂಡು ಅದರಂತೆ, ಹೊರ ಆವರಣದಲ್ಲಿರುವ ಆದೇಶಗಳನ್ನು ೩೬ ಬಾರಿ ಪುನರಾವರ್ತಿಸುತ್ತದೆ. ಆಮೂಲಕ ಚಿತ್ರ ರಚನೆಯಾಗುತ್ತದೆ. ಚೌಕ ಪ್ರೊಸೀಜರ್ ವ್ಯಾಖ್ಯಾನಿಸಿದ ನಂತರ *ಪುನ ೩೬ [ಚೌಕ ಬಲ ೧೦]* ಎಂಬ ಆದೇಶದ ಮೂಲಕ ಇದೇ ಆಕೃತಿಯ ರಚನೆಯನ್ನು ಹಿಂದಿನ ಅಧ್ಯಾಯಗಳಲ್ಲಿ ಮಾಡಿದ್ದೀರಿ. ಒಂದೇ ಆಕೃತಿ ರಚನೆಗಾಗಿ ಇರುವ ಈ ಎರಡು ಆದೇಶಗಳ ಸಾಲಿನಲ್ಲಿ ಇರುವ ವ್ಯತ್ಯಾಸಗಳನ್ನು ಗಮನಿಸಿ.

**ಗಮನಿಸಿ:** *ಪುನ ೩೬ [ಪುನ ೪ [ಮುಂದೆ ೧೦೦ ಬಲ ೯೦]* ಬಲ ೧೦] ಎಂಬ ಆದೇಶ ಸಾಲಿನಲ್ಲಿ ಮೊದಲಿಗೆ ಬಲ ೯೦ ಎಂಬುದರ ಪಕ್ಕದಲ್ಲಿ ಒಂದು ತೆರಪನ್ನು ನೀಡಿ *ತಾಳು ೬೦* ಎಂದು ಬೆರಳಚ್ಚಿಸಿ ಅದೇ ಸಾಲನ್ನು ಅನುಷ್ಠಾನಗೊಳಿಸಿ ನೋಡಿ (ಅಂದರೆ ಎಂಟರ್ ಕೀ ಅಥವಾ ‘ಪಾಲಿಸು’ ಒತ್ತಿ). ಈಗ ಅದೇ ಸಾಲಿನಲ್ಲಿ *ತಾಳು ೬೦* ಎಂಬ ಆದೇಶವನ್ನು ಅದರ ಮೊದಲಿನ ಸ್ಥಳದಿಂದ ಕತ್ತರಿಸಿ ತೆಗೆದು (ಕಟ್‌ಮಾಡಿ) *ಬಲ ೧೦* ಎಂಬುದರ ಮುಂದೆ ಅಂಟಿಸಿ (ಪೇಸ್ಟ್‌ಮಾಡಿ), ಆ ಸಾಲನ್ನು ಅನುಷ್ಠಾನಗೊಳಿಸಿ. ಮೊದಲಿನ ಚಿತ್ರ ರಚನೆ ಕ್ರಮಕ್ಕೂ ಎರಡನೆಯ ಚಿತ್ರರಚನೆಯ ಕ್ರಮಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿ. (ಒಂದು ಚಿತ್ರ ಅಥವಾ ಆಕೃತಿಯ ರಚನೆಯ ನಂತರ ತೆ.ಅ ಆದೇಶದ ಮೂಲಕ ಪರದೆಯನ್ನು ಅಳಿಸಲು ಮರೆಯದಿರಿ).

ವಿವಿಧ ರೀತಿಯ ಮೂರು ಆಯಾಮದ ಚಿತ್ರ ಅಥವಾ ಆಕೃತಿಗಳ ರಚನೆ ಮಾಡಲು, ಸಹಾಯ ಕಡತದಲ್ಲಿರುವ ‘ಚಿತ್ರಲೇಖಿಗಳ ಬಳಕೆ’ ಎಂಬ ವಿಭಾಗವನ್ನು ನೋಡಿ. ಇದಕ್ಕಾಗಿ ಮೊದಲಿಗೆ ಸಹಾಯ ಕ್ಲಿಕ್‌ಮಾಡಿ. ನಂತರ ಭಾಷೆಯ ಬಳಕೆ ಕ್ಲಿಕ್‌ಮಾಡಿ. ತದನಂತರ, ದತ್ತ ಸಂರಚನೆಯ ಮೂಲಾಂಶಗಳು ಕ್ಲಿಕ್‌ಮಾಡಿ. ಅದರಲ್ಲಿರುವ ಚಿತ್ರಲೇಖಿಗಳ ಬಳಕೆ ವಿಭಾಗದಲ್ಲಿರುವ ವಿವಿಧ ಅಧ್ಯಾಯಗಳನ್ನು ನೋಡಿ.

ಅಧ್ಯಾಯ – ೫

# ಆಕೃತಿಗಳನ್ನು ಸೇವ್ ಮಾಡುವುದು – ಲೇಖನಿ ಬಣ್ಣ, ಗಾತ್ರ, ಪರದೆ ಬಣ್ಣ ನಿಗದಿ

(ಜಿ.ಯು.ಐ. ಇಂಟರ್‌ಫೇಸ್ ಬಳಕೆ)

ಕನ್ನಡದ ಲೋಗೋದಲ್ಲಿ ನೀವು ರಚಿಸಿರುವ ಚಿತ್ರಗಳನ್ನು ಅಂದರೆ ಆಕೃತಿಗಳನ್ನು ಉಳಿಸು ಆದೇಶವನ್ನು ಬಳಸಿ ಸೇವ್ ಮಾಡಬಹುದು. ಕಪ್ಪು ಬಣ್ಣದ ಚಿತ್ರಗಳಿಗೆ ಬದಲಾಗಿ ಬಣ್ಣಬಣ್ಣದ ಚಿತ್ರಗಳನ್ನು ರಚಿಸಬಹುದು. ಲೇಖನಿಯ ಗಾತ್ರವನ್ನು ಹೆಚ್ಚಿಸಿಕೊಂಡು ಚಿತ್ರ ಅಥವಾ ಆಕೃತಿಗಳ ರಚನೆಯನ್ನು ಮಾಡಬಹುದು. ಒಂದು ಚಿತ್ರ ರಚನೆಯ ಪಕ್ಕದಲ್ಲಿಯೇ ಮತ್ತೊಂದನ್ನು ರಚಿಸುವಾಗ ಮುಂದೆ ಅಥವಾ ಹಿಂದೆ ಎಂಬ ಆದೇಶಗಳನ್ನು ಬಳಸುವ ಮುನ್ನ ಲೇಖನಿಯನ್ನು ಮೇಲೆ ಎತ್ತುವಂತೆ ಆಮೆಗೆ ಆದೇಶಿಸಿ (*ಲೇಖನಿಎತ್ತು* ಅಥವಾ *ಲೇ.ಎ* ಆದೇಶ), ಆಮೂಲಕ ಆಮೆಯು ಗೆರೆ ಎಳೆಯುವುದನ್ನು ತಪ್ಪಿಸಬಹುದಾಗಿದೆ. ಅಗತ್ಯವಿದ್ದಾಗ (*ಲೇಖನಿಇಳಿಸು* ಅಥವಾ *ಲೇ.ಇ*) ಆದೇಶವನ್ನು ನೀಡುವ ಮೂಲಕ ಗೆರೆ ಎಳೆಯುವ ಸ್ಥಿತಿಗೆ ಆಮೆಯನ್ನು ತರಬಹುದಾಗಿದೆ.

ಈ ಕೆಳಕಂಡವನ್ನು ಮಾಡಿ ನೋಡಿ:

- *ತೆರೆಅಳಿಸು* ಅಥವಾ *ತೆ.ಅ* (ಈಗಾಗಲೇ ಇರುವ ಚಿತ್ರ ಅಥವಾ ಆಕೃತಿ ಅಳಿಸಲ್ಪಡುತ್ತದೆ)
- *ಮುಂದೆ ೧೦೦ ಬಲ ೯೦* (ಆಮೆಯು ಗೆರೆ ಎಳೆಯುತ್ತಾ ೧೦೦ ಹೆಜ್ಜೆಗಳಷ್ಟು ಮುಂದೆ ಹೋಗಿ ಬಲಕ್ಕೆ ತಿರುಗಿ ನಿಲ್ಲುತ್ತದೆ)
- *ಲೇಖನಿಎತ್ತು* ಅಥವಾ *ಲೇ.ಎ* (ಗೆರೆ ಎಳೆಯಲಾಗದಂತೆ ಆಮೆ ತನ್ನ ಲೇಖನಿಯನ್ನು ಮೇಲೆ ಎತ್ತುತ್ತದೆ)
- *ಮುಂದೆ ೧೦೦* (ಲೇಖನಿ ಮೇಲೆ ಎತ್ತಿರುವುದರಿಂದ ಆಮೆ ಗೆರೆ ಎಳೆಯದೆ ಮುಂದೆ ಸಾಗಿದೆ)
- *ಲೇಖನಿಇಳಿಸು* ಅಥವಾ *ಲೇ.ಇ* (ಮೇಲೆ ಎತ್ತಿರುವ ಲೇಖನಿಯನ್ನು ಆಮೆಯು ಕೆಳಗೆ ಇಳಿಸುತ್ತದೆ)
- *ಮುಂದೆ ೧೦೦* (ಲೇಖನಿ ಕೆಳಗೆ ಇಳಿಸಿರುವುದರಿಂದ, ಆಮೆಯು ಮುಂದೆ ಚಲಿಸಿದಂತೆಲ್ಲಾ ಗೆರೆ ಎಳೆಯಲ್ಪಡುತ್ತದೆ)

ಬೇರೆ ಬೇರೆ ಚಿತ್ರಗಳು ಅಥವಾ ಆಕೃತಿಗಳ ರಚನೆಗಳನ್ನು ಬೇರೆ ಬೇರೆ ಬಣ್ಣಗಳಲ್ಲಿ ಮಾಡಲು ಈ ಕೆಳಕಂಡವುಗಳನ್ನು ಪ್ರಯತ್ನಿಸಿ:

- ಮೊದಲಿಗೆ ತೆ.ಅ ಮಾಡಿ
- ಮೇನ್ ಮೆನುವಿನಲ್ಲಿರುವ **ಸಿದ್ಧತೆ->ಲೇಖನಿ ಗಾತ್ರ** ಕ್ಲಿಕ್‌ಮಾಡಿ
- ಅತ್ಯಂತ ಚಿಕ್ಕ ಮತ್ತು ಅತ್ಯಂತ ದೊಡ್ಡ ಗಾತ್ರದ ಗೆರೆರೂಪದಲ್ಲಿರುವ ಲೇಖನಿಗಾತ್ರವನ್ನು ನಿಮ್ಮ ಅಗತ್ಯಕ್ಕೆ ತಕ್ಕಂತೆ ಕ್ಲಿಕ್‌ಮಾಡಿ ಸರಿ ಎಂಬುದನ್ನು ಕ್ಲಿಕ್‌ಮಾಡಿ
- ಮೇನ್ ಮೆನುವಿನಲ್ಲಿರುವ **ಸಿದ್ಧತೆ->ಲೇಖನಿ ಬಣ್ಣ** ಕ್ಲಿಕ್‌ಮಾಡಿ.
- ವಿವಿಧ ಬಣ್ಣಗಳಲ್ಲಿ ನಿಮಗೆ ಅಗತ್ಯವಿರುವುದನ್ನು ಕ್ಲಿಕ್‌ಮಾಡಿ, ಲೇಖನಿ ಬಣ್ಣವನ್ನು ನಿಗದಿಸಿ, ಸರಿ ಎಂಬುದನ್ನು ಕ್ಲಿಕ್‌ಮಾಡಿ
- ಚೌಕ ಎಂದು ಬೆರಳಚ್ಚಿಸಿ (ಈ ಪ್ರೊಸೀಜರ್ ಲೋಡ್ ಆಗಿರಬೇಕು ಎಂಬುದನ್ನು ಗಮನಿಸಿ) ಆಯ್ಕೆ ಮಾಡಿಕೊಂಡಿರುವ ಲೇಖನಿ ಗಾತ್ರದಲ್ಲಿ ಮತ್ತು ಲೇಖನಿ ಬಣ್ಣದಲ್ಲಿ ಚೌಕ ರಚನೆಯಾಗಿರುವುದನ್ನು ಗಮನಿಸಿ.
- ಚಿತ್ರ ಅಥವಾ ಆಕೃತಿಯ ಹಿನ್ನೆಲೆಯ ಬಣ್ಣ ಬದಲಿಸಲು, ಪರದೆ ಬಣ್ಣ ನಿಗದಿಪಡಿಸಬಹುದು. **ಸಿದ್ಧತೆ-> ಪರದೆ ಬಣ್ಣ** ಕ್ಲಿಕ್‌ಮಾಡಿ. ಸೂಕ್ತ ಆಯ್ಕೆಮಾಡಿ, ಸರಿ ಕ್ಲಿಕ್‌ಮಾಡಿ.
- ಮೇಲಿನ ಕ್ರಮಗಳನ್ನು ಅನುಸರಿಸಿ, ಬೇರೆ ಬೇರೆ ಲೇಖನಿ ಗಾತ್ರಗಳು ಮತ್ತು ಬಣ್ಣಗಳನ್ನು ಆಯ್ಕೆ ಮಾಡಿಕೊಂಡಿ ವಿವಿಧ ಚಿತ್ರಗಳು ಅಥವಾ ಆಕೃತಿಗಳನ್ನು ರಚಿಸಿ, ನಂತರ ಅವುಗಳನ್ನು ಮುಂದಿನ ಉಪಯೋಗಕ್ಕಾಗಿ ಸೇವ್ ಮಾಡಿ.

*ಚಿತ್ರ ರಚನೆಗಳನ್ನು ಸೇವ್ ಮಾಡಲು:*

- ಮೇನ್ ಮೆನುವಿನಲ್ಲಿನ ಚಿತ್ರ->ಉಳಿಸು ಕ್ಲಿಕ್‌ಮಾಡಿ.
- ಸೂಕ್ತ ಕಡತದ ಹೆಸರನ್ನು ನೀಡಿ ಸೇವ್ ಕ್ಲಿಕ್‌ಮಾಡಿ.

*ರಚಿಸಿದ ಚಿತ್ರಗಳನ್ನು ಅಳಿಸಿ ಹೊಸ ಚಿತ್ರಗಳನ್ನು ರಚಿಸಲು:*

- ಮೇನ್ ಮೆನುವಿನಲ್ಲಿನ ಚಿತ್ರ->ಹೊಸ ಕ್ಲಿಕ್‌ಮಾಡಿ.

*ರಚಿಸಿ ಸೇವ್‌ಮಾಡಿರುವ ಆಕೃತಿಗಳು ಅಥವಾ ಚಿತ್ರಗಳನ್ನು ಮತ್ತೆ ತೆಗೆದು ಬಳಸಲು:*

- ಮೇನ್ ಮೆನುವಿನಲ್ಲಿನ ಚಿತ್ರ->ತೆಗೆ ಕ್ಲಿಕ್‌ಮಾಡಿ.
- ಈಗಾಗಲೇ ರಚಿಸಿ ಸೇವ್‌ಮಾಡಲಾದ ಕಡತದ ಹೆಸರನ್ನು ಕ್ಲಿಕ್‌ಮಾಡಿ.

*ಈಗಾಗಲೇ ರಚಿಸಿ ಸೇವ್ ಮಾಡಲಾಗಿರುವ ಪ್ರೊಸೀಜರ್‌ಗಳನ್ನು ಮತ್ತೆ ಮರುಭರಿಕೆ ಅಂದರೆ ರಿಲೋಡ್ ಮಾಡಲು:*

- ಮೇನ್ ಮೆನುವಿನಲ್ಲಿನ ಕಡತ->ತೆಗೆ ಕ್ಲಿಕ್‌ಮಾಡಿ.
- ಈಗಾಗಲೇ ರಚಿಸಿ ಸೇವ್‌ಮಾಡಲಾದ ಕಡತದ ಹೆಸರನ್ನು ಕ್ಲಿಕ್‌ಮಾಡಿ.

*ಚಿತ್ರಗಳನ್ನು ಪ್ರಿಂಟರ್ ಬಳಸಿ ಹಾಳೆಯ ಮೇಲೆ ಮುದ್ರಿಸಿ ಪಡೆಯಲು:*

- ಚಿತ್ರ->ಮುದ್ರಿಸು ಕ್ಲಿಕ್‌ಮಾಡಿ, ಸೂಕ್ತ ಆಯ್ಕೆಗಳನ್ನು ಮಾಡಿ, ಓಕೆ ಕ್ಲಿಕ್‌ಮಾಡಿ

*ರಚಿಸಲಾಗಿರುವ ದೊಡ್ಡ ಗಾತ್ರದ ಚಿತ್ರಗಳನ್ನು ಪೂರ್ಣವಾಗಿ ನೋಡಲು (ಝೂಮ್‌ಇನ್ ಮತ್ತು ಝೂಮ್‌ಔಟ್):*

- ಮೇನ್ ಮೆನುವಿನಲ್ಲಿನ ಗಾತ್ರ->ಕುಗ್ಗಿಸು ಕ್ಲಿಕ್‌ಮಾಡಿ (ಇನ್ನಷ್ಟು ಚಿಕ್ಕದಾಗಿ ಮಾಡಲು ಮತ್ತೆ ಕುಗ್ಗಿಸುವನ್ನೇ ಕ್ಲಿಕ್‌ಮಾಡಿ)
- ಗಾತ್ರ->ಹಿಗ್ಗಿಸು ಕ್ಲಿಕ್‌ಮಾಡಿ (ಚಿಕ್ಕದಾಗಿರುವ ಚಿತ್ರ ಅಥವಾ ಆಕೃತಿ ಇನ್ನಷ್ಟು ದೊಡ್ಡದಾಗಿ ಕಾಣುತ್ತದೆ)
- ಗಾತ್ರ->ಸಹಜ ಕ್ಲಿಕ್‌ಮಾಡಿ (ಪರದೆಯ ನೋಟದ ಗಾತ್ರವು ಸಹಜ ಸ್ಥಿತಿಗೆ ಮರಳುತ್ತೆ.)

ಅಧ್ಯಾಯ – ೬

# ಅಂಕಗಣಿತ ಮತ್ತು ತರ್ಕ

(‘ಕನ್ನಡ ಲೋಗೋ’ ಭಾಷೆಯ ಬಳಕೆ)

ಇನ್‌ಪುಟ್ ಸಹಿತ ನೀಡುವ ಆದೇಶಗಳನ್ನು ಪಾಲಿಸಿ ‘ಕನ್ನಡ ಲೋಗೋ’ವು ಅಂಕಗಣಿತದ ಸಾಂಖ್ಯಿಕ ಕ್ರಿಯೆಗಳನ್ನು ನಿರ್ವಹಿಸಿ ಉತ್ತರಗಳನ್ನು ಆದೇಶಕದಲ್ಲಿ *ತೋರಿಸುತ್ತದೆ* ಅಥವಾ *ಮುದ್ರಿಸುತ್ತದೆ.* ಹಲವಾರು ನಿಯಂತ್ರಣ ಆದೇಶಗಳನ್ನು ಪಾಲಿಸುವ ಮೂಲಕ ‘ಕನ್ನಡ ಲೋಗೋ’ತರ್ಕಬದ್ಧವಾಗಿ ಕಾರ್ಯನಿರ್ವಹಿಸುತ್ತದೆ. ಹೀಗಿದ್ದರೆ, ಹೀಗೆಮಾಡು. ಹಾಗಿಲ್ಲವಾದರೆ ಹೀಗೆ ಮಾಡು ಎಂಬುದನ್ನು ಅರ್ಥಮಾಡಿಕೊಂಡು ‘ಕನ್ನಡ ಲೋಗೋ’ಕಾರ್ಯನಿರ್ವಹಿಸುತ್ತದೆ. ಅಲ್ಲದೆ, ಷರತ್ತುಗಳ ಅಂದರೆ ಕಂಡಿಷನ್‌ಗಳ ಪರಾಮರ್ಶನೆ ಮಾಡಿ ನಿಜ ಮತ್ತು ನಿಜವಲ್ಲ ಎಂಬ ಉತ್ತರಗಳನ್ನು ಪಡೆದು ಮುಂದಿನ ಕ್ರಮಗಳನ್ನು ತರ್ಕಬದ್ಧವಾಗಿ ಮುಂದುವರೆಸುತ್ತದೆ. ಬದಲಿಕಗಳನ್ನು ಅಂದರೆ ವೇರಿಯಬಲ್ಸ್ ಸೃಷ್ಟಿಸಿ ಅವುಗಳಿಗೆ ಮೌಲ್ಯಗಳನ್ನೂ ಸಹ ನೀಡಬಹುದು. ತಾರ್ಕಿಕ ಕ್ರಿಯೆಗಳ ಅನುಸಾರ ಈ ಬದಲಿಕಗಳ ಮೌಲ್ಯಗಳು ಬದಲಾಗುತ್ತಾ ಸಾಗಿ ಕೊನೆಯಲ್ಲಿ ಅಂತಿಮ ಫಲಿತಾಂಶವು ಪ್ರಕಟಗೊಳ್ಳುತ್ತದೆ.

‘ಕನ್ನಡ ಲೋಗೋ’ ಅಂಕಗಣಿತದ ಬಹುತೇಕ ಎಲ್ಲಾ ಸಾಂಖ್ಯಿಕ ಕ್ರಿಯೆಗಳನ್ನು ನಿರ್ವಹಿಸುತ್ತದೆ. ಎರಡು ಸಂಖ್ಯೆಗಳನ್ನು ಇನ್‌ಪುಟ್‌ಆಗಿ ನೀಡುವ ಮೂಲಕ ಅವೆರಡನ್ನೂ ಕೂಡುವುದು, ಕಳೆಯುವುದು, ಭಾಗಿಸುವುದು ಮತ್ತು ಗುಣಿಸುವುದು ಅಲ್ಲದೆ ಇತರೆ ಸಾಂಖ್ಯಿಕ ಕ್ರಿಯೆಗಳಾದ ವರ್ಗಮೂಲ, ಘಾತ, ಲಾಗ್, ಪೈ; ತ್ರಿಕೋಣಮಿತೀಯ ಟ್ಯಾನ್, ಸೈನ್ ಇತ್ಯಾದಿಗಳನ್ನು ನಿರ್ವಹಿಸಬಹುದು.

ಈ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ತಿಳಿದು ಅಭ್ಯಾಸ ಮಾಡಲು, ಸಹಾಯ ಕಡತದಲ್ಲಿನ ಭಾಷೆಯ ಬಳಕೆ -> ದತ್ತ ಸಂರಚನಾ ಮೂಲಾಂಶಗಳು -> ಅಂಕ ಗಣಿತ -> ಸಾಂಖ್ಯಿಕ ಕ್ರಿಯೆಗಳು ಇವುಗಳನ್ನು ಕ್ರಮವಾಗಿ ಕ್ಲಿಕ್‌ಮಾಡಿ. ಲಭ್ಯವಾಗುವ ಅಧ್ಯಾಯಗಳನ್ನು ಅಭ್ಯಸಿಸಿ, ಮುಂದುವರೆಯಿರಿ.

ಸಾಂಖ್ಯಿಕ ಕ್ರಿಯೆಗಳ ಕೆಲವು ಸರಳ ಉದಾಹರಣೆಗಳು ಈ ಕೆಳಕಂಡಂತಿವೆ.

ಸರಳವಾದ ಸಾಂಖ್ಯಿಕ ಕ್ರಿಯೆಗಳನ್ನು ನಿರ್ವಹಿಸಲು ಈ ಕೆಳಕಂಡ ಆದೇಶ ಸಾಲುಗಳನ್ನು ಆದೇಶಕದಲ್ಲಿ ಬೆರಳಚ್ಚಿಸಿ ಎಂಟರ್ ಕೀಲಿ ಅಥವಾ ಪಾಲಿಸು ಒತ್ತಿ. ಪರಿಣಾಮವನ್ನು ಗಮನಿಸಿ.

- *ತೋರು ೨೦+೧೨* (ಆದೇಶಕದಲ್ಲಿ ಈ ಸಾಲಿನ ಅಡಿಯಲ್ಲಿಯೇ ೩೨ ಎಂದು ಉತ್ತರವು ಪ್ರಕಟವಾಗುತ್ತದೆ ಎಂಬುದನ್ನು ಗಮನಿಸಿ)
- *ತೋರು ೨೦–೧೨* (ಆದೇಶಕದಲ್ಲಿ ಈ ಸಾಲಿನ ಅಡಿಯಲ್ಲಿಯೇ ೮ ಎಂದು ಉತ್ತರವು ಪ್ರಕಟವಾಗುತ್ತದೆ)
- *ತೋರು ೨೦*೧೨* (೨೪೦ ಎಂದು ಪ್ರಕಟವಾಗುತ್ತದೆ)
- *ತೋರು ೨೦/೧೨* (೧.೬೬೬೬೬೬೬೬೬೬೬೬೬೬೬೭ ಎಂದು ಪ್ರಕಟವಾಗುತ್ತದೆ)
- ಮೇಲಿನ ರೀತಿಯಲ್ಲಿಯೇ ಬೇರೆ ಬೇರೆ ಸಂಖ್ಯೆಗಳನ್ನು ನೀಡಿ ಉತ್ತರಗಳನ್ನು ಗಮನಿಸಿ
- *ತೋರು ೨೫+೨*೩/೪* (೨೬.೫ ಎಂಬ ಉತ್ತರ ದೊರೆಯುವುದನ್ನು ಗಮನಿಸಿ)
- ಮುದ್ರಿಸು (೨೫+೨)*೩/೪ (೨೦.೨೫ ಎಂದು ಉತ್ತರ ಸಿಗುತ್ತದೆ. ಗಮನಿಸಿ ‘ಕನ್ನಡ ಲೋಗೋ’ಲೆಕ್ಕಾಚಾರಗಳನ್ನು ಬಲದಿಂದ ಎಡಕ್ಕೆ ಮಾಡುತ್ತದೆ. ಅಂದರೆ, ಮೊದಲಿಗೆ ೩/೪, ಬಂದ ಉತ್ತರವನ್ನು ಎರಡರಿಂದ ಗುಣಿಸುವುದು, ನಂತರ ಅದನ್ನು ೨೫ಕ್ಕೆ ಕೂಡುವುದು)
- ಮೇಲೆ ಹೇಳಿರುವ ಉದಾಹರಣೆಗಳಲ್ಲಿ *ತೋರು* ಆದೇಶದ ಬದಲಿಗೆ *ಮುದ್ರಿಸು* ಆದೇಶವನ್ನೂ ಸಹ ಬಳಸಬಹುದು.

**ಈ ಕೆಳಕಂಡವನ್ನು ಪ್ರಯತ್ನಿಸಿ:**

- ತೋರು ವ.ಮೂ ೪ (೪ರ ವರ್ಗಮೂಲ ೨ನ್ನು ಆದೇಶಕದಲ್ಲಿ ತೋರುತ್ತದೆ)
- ಮುದ್ರಿಸು ವ.ಮೂ ೯ (೯ ೪ರ ವರ್ಗಮೂಲ ೩ನ್ನು ಆದೇಶಕದಲ್ಲಿ ಮುದ್ರಿಸುತ್ತದೆ)
- ತೋರು ಯಾವುದಾದರು ೧೦ (೦ ಯಿಂದ ೧೦ರ ಒಳಗಿನ ಯಾವುದಾದರೊಂದು ಸಂಖ್ಯೆಯನ್ನು ತೋರುತ್ತದೆ)
- ಪುನ ೧೦ [ತೋರು ಯಾವುದಾದರು ೧೦] (೦ ಯಿಂದ ೧೦ರ ಒಳಗಿನ ಯಾವುದಾದರು ೧೦ ಸಂಖ್ಯೆಗಳನ್ನು ಒಂದರ ಕೆಳಕೆ ಒಂದರಂತೆ ತೋರುತ್ತದೆ. ಒಂದೇ ಸಂಖ್ಯೆ ಪುನರಾವರ್ತನೆಯಾಗಬಹುದು. ಯಾವುದಾದರು ಸಂಖ್ಯೆ ಎಂದರೆ ರ್‍ಯಾಂಡಂ ನಂಬರ್. ಮತ್ತೆ ಇದೇ ಆದೇಶವನ್ನು ಬಳಸಿದಾಗ ಸಂಖ್ಯೆಗಳ ಕ್ರಮದಲ್ಲಿ ವ್ಯತ್ಯಾಸವಾಗಬಹುದು)
- ತೋರು ಪೂರ್ಣಗೊಳಿಸು ೮.೨ (ದಶಾಂಶವನ್ನು ಬಿಟ್ಟು ಕೇವಲ ೮ಅನ್ನು ಪ್ರಕಟಿಸುತ್ತದೆ)
- ಮುದ್ರಿಸು ಪೂರ್ಣಗೊಳಿಸು ೮.೭ (ದಶಾಂಶವನ್ನು ಮುಂದಿನ ಪೂರ್ಣಾಂಕಕ್ಕೆ ಬದಲಿಸಿ ೯ ನೀಡುತ್ತದೆ)

ತಾರ್ಕಿಕ ಕ್ರಿಯೆಗಳನ್ನೂ ಸಹ 'ಕನ್ನಡ ಲೋಗೋ' ನಿರ್ವಹಿಸುತ್ತದೆ. ಎರಡು ಅಥವಾ ಅದಕ್ಕೂ ಹೆಚ್ಚಿನ ಷರತ್ತುಗಳನ್ನು ಅಂದರೆ ಕಂಡಿಷನ್‌ಗಳನ್ನು ಪರಾಮರ್ಶಿಸಿ, ನಿಜ ಅಥವಾ ನಿಜವಲ್ಲ ಎಂಬ ಸಂದರ್ಭಗಳನ್ನು ಗುರುತಿಸಿ, ಸೂಕ್ತ ರೀತಿಯಲ್ಲಿ ಕಾರ್ಯವನ್ನು 'ಕನ್ನಡ ಲೋಗೋ' ಕೈಗೊಳ್ಳುತ್ತದೆ.

ಭಾಷೆಯ ಬಳಕೆ –> ಕಾರ್ಯಾವಕಾಶ ವ್ಯವಸ್ಥಾಪನೆ –> ಕಾರ್ಯಾವಕಾಶ ನಿಯಂತ್ರಣ ಕ್ಲಿಕ್‌ಮಾಡಿ. ಅಲ್ಲಿರುವ ವಿವಿಧ ಅಧ್ಯಾಯಗಳ ಕುರಿತು ಓದಿಕೊಂಡು, ಮುಂದುವರೆಯಿರಿ. ಬದಲಿಕದ ನೇಮಕ ಅಂದರೆ ವೇರಿಯಬಲ್‌ಗಳನ್ನು ಹೆಸರಿಸಲು ಇರುವ ವಿವಿಧ ವಿಧಾನಗಳನ್ನು ತಿಳಿಯಲು, ಸಹಾಯ ಕಡತದಲ್ಲಿನ, ಭಾಷೆಯ ಬಳಕೆ –> ಕಾರ್ಯಾವಕಾಶ ವ್ಯವಸ್ಥಾಪನೆ –> ಬದಲಿಕದ ವ್ಯಾಖ್ಯಾನ ಈ ವಿಭಾಗದ ಎಲ್ಲಾ ಅಧ್ಯಾಯಗಳನ್ನು ನೋಡಿ.

**ಈ ಕೆಳಕಂಡ ಕೆಲವು ಸರಳ ಉದಾಹರಣೆಗಳನ್ನು ನೋಡಿ.**

- *ಆದರೆ ೧=೧ [ಮುದ್ರಿಸು [ಹೌದು, ಇದು ನಿಜ]]* (ಒಂದು ಒಂದಕ್ಕೆ ಸಮನಾದರೆ ಹೌದು, ಇದು ನಿಜ ಎಂದು ಮುದ್ರಿಸು ಎಂದು ಹೇಳಿದಾಗ, ಸಾಧ್ಯತೆಯು ನಿಜ ಆಗಿರುವುದರಿಂದ *ಹೌದು, ಇದು ನಿಜ* ಎಂದು ಮುದ್ರಿಸುತ್ತದೆ)
- ಸಂಪಾದಕದಲ್ಲಿ ಈ ಕೆಳಕಂಡ ಪ್ರೊಸೀಜರ್‌ನ್ನು ಬೆರಳಚ್ಚಿಸಿ ಉಳಿಸಿ ಹೊರಬನ್ನಿ.

  ಆಗಲು ಹಿರಿದು :ಕ :ಬ
  ಹೊರನೀಡು (ಆದರೆ :ಕ> :ಬ [:ಕ] [:ಬ])
  ಕೊನೆ

- *ತೋರು ಹಿರಿದು ೨ ೩* (೨ ಮತ್ತು ೩ ಈ ಎರಡು ಸಂಖ್ಯೆಗಳಲ್ಲಿ ಹಿರಿದು ಯಾವುದು ತೋರು ಎಂದು ಕೇಳಲಾಗಿದೆ. ಇವೆರೆಡರಲ್ಲಿ ೩ ಹಿರಿದು ಆದುದರಿಂದ ೩ ಪ್ರಕಟವಾಗುತ್ತದೆ)
- *ತೋರು ಹಿರಿದು ೩ ೨* (ಇಲ್ಲಿ ಸಂಖ್ಯೆಗಳನ್ನು ಹಿಂದು ಮುಂದಾಗಿಸಿ ನೀಡಲಾಗಿದೆ. ಆದರೂ, 'ಕನ್ನಡ ಲೋಗೋ'ತರ್ಕಬದ್ಧವಾಗಿ ಆಲೋಚಿಸಿ ೩ನ್ನೆ ಹಿರಿದು ಎಂದು ಪ್ರಕಟಿಸುತ್ತದೆ)

> ಗಮನಿಸಿ: ಈ ಪ್ರೊಸೀಜರ್‌ನಲ್ಲಿ ಕ ಮತ್ತು ಬ ಎಂಬ ಎರಡು ಬದಲಿಕಗಳನ್ನು ಅಂದರೆ ವೇರಿಯಬಲ್‌ಗಳನ್ನು ಸೃಷ್ಟಿಸಲಾಗಿದೆ. ಕ ಬ ಗಿಂತ ಹಿರಿದು ಆದರೆ ಕ ಹೊರನೀಡು ಇಲ್ಲವಾದರೆ ಬ ಹೊರನೀಡು ಎಂಬುದು ಈ ಆದೇಶದ ಷರತ್ತು ಆಗಿದೆ ಎಂಬುದನ್ನು ಗಮನಿಸಿ. ಕ ಮತ್ತು ಬ ಬದಲಿಕಕ್ಕೆ ಹಿರಿದು ೨ ೩ ಎಂದು ಬೆರಳಚ್ಚಿಸುವ ಮೂಲಕ ಮೌಲ್ಯವನ್ನು ನೀಡಲಾಗುತ್ತದೆ.
> ತಾರ್ಕಿಕ ಕ್ರಿಯೆಗಳಿಗೆ ಕೆಲವು ಸರಳ ಉದಾಹರಣೆಗಳನ್ನು ನೋಡಿ. ಈ ಕೆಳಕಂಡವನ್ನು ಮಾಡಿ:

- *ಅಲ್ಲವಾದರೆ ೧=೧ [ಮುದ್ರಿಸು [ಹೌದು, ಇದು ನಿಜ]] [ಮುದ್ರಿಸು [ಅಲ್ಲ, ಇದು ನಿಜವಲ್ಲ]]* (ಒಂದು ಒಂದಕ್ಕೆ ಸಮನಾಗಿರುವುದು ಹೌದು ಆದ್ದರಿಂದ, 'ಹೌದು, ಇದು ನಿಜ' ಎಂದು ಮುದ್ರಿಸಿದೆ. ಇದು ಅಲ್ಲವಾಗಿದ್ದರೆ, ಮುಂದೆ ನೀಡಲಾಗಿರುವ ಅಲ್ಲ, ಇದು ನಿಜವಲ್ಲ ಎಂದು ಮುದ್ರಿಸುತ್ತಿತ್ತು. ಈ ಕೆಳಕಂಡಂತೆ ೧=೨ ಎಂದು ಮಾಡಿ ಅದೇ ಸಾಲನ್ನು ಪಾಲಿಸುವಂತೆ ಮಾಡಿ)

- *ಅಲ್ಲವಾದರೆ ೧=೨ [ಮುದ್ರಿಸು [ಹೌದು, ಇದು ನಿಜ]] [ಮುದ್ರಿಸು [ಅಲ್ಲ, ಇದು ನಿಜವಲ್ಲ]]* (ಈಗ 'ಅಲ್ಲ, ಇದು ನಿಜವಲ್ಲ' ಎಂದು ಮುದ್ರಿತವಾಗುತ್ತದೆ)

***ಇದನ್ನು ಪ್ರಯತ್ನಿಸಿ:***

- ಮೊದಲಿಗೆ *ನೇಮಿಸು "ಅ ೦* ಎಂಬ ಸಾಲನ್ನು ಬೆರಳಚ್ಚಿಸಿ ಎಂಟರ್ ಕೀಲಿ ಅಥವಾ ಪಾಲಿಸು ಒತ್ತಿ.
- ನಂತರ *ಆಗುವವರೆಗೆ [:ಅ>೩] [ನೇಮಿಸು "ಅ :ಅ+೧ ಮುದ್ರಿಸು :ಅ]* (ಆದೇಶಕದಲ್ಲಿ ೧ ರಿಂದ ೪ರವರೆಗೆ ಸಂಖ್ಯೆಗಳು ಮುದ್ರಿತಗೊಂಡಿರುವುದನ್ನು ಗಮನಿಸಿ.

**ವಿವರಣೆ:** ಈ ಆದೇಶದಲ್ಲಿ ಷರತ್ತು ಏನೆಂದರೆ, :ಅ ಎಂಬ ಬದಲಿಕವು ೩ ಆಗುವವರೆಗೆ ಮುಂದೆ ನೀಡಲಾದ ಪಟ್ಟಿಯನ್ನು ಪುನರಾವರ್ತಿಸುತ್ತಲೇ ಇರು ಎಂದಾಗಿದೆ. ಮೊದಲಿಗೆ :ಅ ಎಂಬುದನ್ನು ೦ ಎಂಬುದಾಗಿ ನೇಮಿಸಲಾಗಿದೆ. ನಂತರ, ಮೊದಲ ಪ್ರಯತ್ನವಾಗಿ :ಅ ಗೆ ಒಂದನ್ನು ಕೂಡಿಸಿ :ಅ ಅನ್ನು ಮತ್ತೆ ನೇಮಿಸಲಾಗಿದೆ. ಅ ನ ಮೌಲ್ಯ ಈಗ ೧, ನಂತರ, ಮುದ್ರಿಸು :ಅ ಎಂಬ ಆದೇಶದ ಅನ್ವಯ ೧ ಆದೇಶಕದಲ್ಲಿ ಮುದ್ರಿತವಾಗಿದೆ. ಒಂದೇ ಕೆಲಸವನ್ನು ಮೂರು ಬಾರಿ ಪುನರಾವರ್ತಿಸಿದರೆ :ಅ ನ ಮೌಲ್ಯ ೩ ಆಗುತ್ತದೆ. ಷರತ್ತು ಪೂರೈಕೆಯಾದ ತಕ್ಷಣ ಪುನರಾವರ್ತನೆ ನಿಲ್ಲುತ್ತದೆ.

**ವಿಶೇಷವಾಗಿ ಗಮನಿಸಿ:** ಕನ್ನಡ ಲೋಗೋದಲ್ಲಿ ಸುಮಾರು ೩೦೦ಕ್ಕೂ ಹೆಚ್ಚಿನ ಆದೇಶಗಳಿಗೆ, ಇವುಗಳನ್ನು ಬಳಸುವುದು ಹೇಗೆ?, ಮೇನ್ ಮೆನುವಿನಲ್ಲಿರುವ ಜಿ.ಯು.ಐ ಬಳಸುವುದು ಹೇಗೆ? ಆದೇಶಗಳನ್ನು ನೀಡಲು ಕನ್ನಡ ಬೆರಳಚ್ಚಿಸುವುದು ಹೇಗೆ? ಕೀಲಿಮಣೆ ವಿನ್ಯಾಸ ಯಾವುದು? ಅದನ್ನು ಕಲಿಯುವ ಕ್ರಮಗಳು ಯಾವುವು? ಕನ್ನಡ ಲೋಗೋದ ಪರಿಚಯ, ಏನಿದು? ಇದು ಯಾಕೆ ಬೇಕು? ಎಲ್ಲಿಂದ ಪ್ರಾರಂಭಿಸುವುದು? – ಇವುಗಳಿಗೆ ಮತ್ತು ಇಂಥವೇ ಹಲವಾರು ಪ್ರಶ್ನೆಗಳಿಗೆ ಸೂಕ್ತ ಉತ್ತರಗಳು ನಿಮಗೆ ಸಹಾಯ ಕಡತದಲ್ಲಿ ದೊರೆಯುತ್ತವೆ. ಈ ಸಹಾಯ ಕಡತವನ್ನು ಪರಿಶೀಲಿಸುವುದರ ಕುರಿತಾಗಿ ಓದಿಕೊಂಡು ಅಭ್ಯಾಸವನ್ನು ಮುಂದುವರೆಸಿ.

ಅಧ್ಯಾಯ – ೭

# ಬಳಸಲು ‘ಸಹಾಯ’

‘ಕನ್ನಡ ಲೋಗೋ’ ಸಹಾಯ ಕಡತವು ಯಾವುದೇ ವಿಂಡೋಸ್ ಅಪ್ಲಿಕೇಷನ್‌ನ ಹೆಲ್ಪ್ ಫೈಲ್‌ನ ರೀತಿಯಲ್ಲಿಯೇ ಒಂದು ಸ್ಟ್ಯಾಂಡರ್ಡ್ ‘ಸಿಎಚ್‌ಎಂ’ ಕಡತವಾಗಿದೆ. ಇದೊಂದು ಶಿಷ್ಟ ರೂಪದ, ಬಳಕೆದಾರರಿಗೆ ಪರಿಚಿತ ರೂಪವಾಗಿದ್ದು, ಸಹಾಯವನ್ನು ಪಡೆದುಕೊಳ್ಳುವುದು ಅತ್ಯಂತ ಸುಲಭವಾಗಿದೆ.

ಕನ್ನಡ ಲೋಗೋದಲ್ಲಿನ ಎಲ್ಲಾ ಆದೇಶ ಪದಗಳ ಕುರಿತು ‘ಸಹಾಯ’ ಪಡೆಯಲು, ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ:

- ಮೇನ್ ಮೆನುವಿನಲ್ಲಿರುವ **ಸಹಾಯ** ಕ್ಲಿಕ್‌ಮಾಡಿ (ವಿವರಗಳು ಕಾಣಿಸಿಕೊಳ್ಳುತ್ತವೆ)
- **ಪರಿವಿಡಿ** ಕ್ಲಿಕ್‌ಮಾಡಿ (ಈ ಕೆಳಕಂಡ ವಿಂಡೋ ಪ್ರಕಟವಾಗುತ್ತದೆ)




ಕನ್ನಡ ಲೋಗೋದಲ್ಲಿ ಸುಮಾರು ೩೦೦ಕ್ಕೂ ಹೆಚ್ಚಿನ ಆದೇಶಗಳಿವೆ. ಸಹಾಯ ಕಡತದಲ್ಲಿ ಈ ಎಲ್ಲಾ ಆದೇಶಗಳನ್ನು ಬಳಸುವುದು ಹೇಗೆ ಎಂಬುದನ್ನು ಸರಳ ಉದಾಹರಣೆಗಳ ಸಹಿತ ವಿವರಿಸಲಾಗಿದೆ.

- *ಪರಿಚಯ*
- *ಕನ್ನಡ ಬೆರಳಚ್ಚು ಸಹಾಯ*
- *ಜಿ.ಯು.ಐ. ಇಂಟರ್‌ಫೇಸ್ ಬಳಕೆ*
- *ಭಾಷೆಯ ಬಳಕೆ*

– ಎಂಬ ಪ್ರಮುಖವಾದ ನಾಲ್ಕು ವಿಭಾಗಗಳಿವೆ.

- *ಪರಿಚಯ* – ವಿಭಾಗದಲ್ಲಿ, ಲೋಗೋ ಕುರಿತಾಗಿ ಮಾಹಿತಿ, ಕನ್ನಡ ಲೋಗೋದ ಅಗತ್ಯ, ಕಲಿಕೆಯನ್ನು ಆರಂಭಿಸುವುದು ಹೇಗೆ ಎಂಬ ಬಗ್ಗೆ ವಿವರಣೆ ಇದೆ
- *ಕನ್ನಡ ಬೆರಳಚ್ಚು ಸಹಾಯ* – ವಿಭಾಗದಲ್ಲಿ, ಆದೇಶಗಳನ್ನು ಬೆರಳಚ್ಚಿಸಲು ಇರುವ ಕೀಲಿಮಣೆ ವಿನ್ಯಾಸ, ಅದನ್ನು ಕಲಿಯುವು ವಿಧಾನಗಳನ್ನು ವಿವರಿಸಲಾಗಿದೆ.
- *ಜಿ.ಯು.ಐ. ಇಂಟರ್‌ಫೇಸ್ ಬಳಕೆ* – ವಿಭಾಗದಲ್ಲಿ, ಮೇನ್ ಮೆನುವಿನಲ್ಲಿ ಮತ್ತು ಅದರ ಅಡಿಯಲ್ಲಿನ ಐಟಂಗಳನ್ನು ಕ್ಲಿಕ್‌ಮಾಡುವ ಮೂಲಕ ಏನೆಲ್ಲವನ್ನೂ ಮಾಡಬಹುದು ಎಂಬುದನ್ನು ವಿವರಿಸಲಾಗಿದೆ.
- *ಭಾಷೆಯ ಬಳಕೆ* – ವಿಭಾಗವು, 'ಕನ್ನಡ ಲೋಗೋ' ಪ್ರೋಗ್ರಾಮಿಂಗ್ ಭಾಷೆಯ ಅತ್ಯಂತ ಮಹತ್ವದ ವಿಭಾಗವಾಗಿದ್ದು, ಕನ್ನಡದಲ್ಲಿಯೇ ಪ್ರೊಗ್ರಾಮ್‌ಗಳನ್ನು ರಚಿಸಲು, ಯಾವ ಯಾವ ಪರಿಭಾಷೆಯಲ್ಲಿ ಅಂದರೆ ರೀತಿ, ವಿನ್ಯಾಸ, ಕ್ರಮ – ಇವುಗಳಲ್ಲಿ ಪ್ರೋಗ್ರಾಮ್ ರಚನೆಯ ವ್ಯಾಕರಣವನ್ನು (ಸಿಂಟ್ಯಾಕ್ಸ್) ಬಳಸಲಾಗಿದೆ ಎಂಬುದನ್ನು ವಿವರಿಸುತ್ತದೆ.

**ಸಹಾಯ ಕುರಿತಾಗಿ ಪ್ರಮುಖ ಅಂಶಗಳನ್ನು ಗಮನಿಸಿ:**

- ಸರಳವಾದ ಒಂದೊಂದೇ ಸಾಲಿನ ಆದೇಶಗಳ ಮೂಲಕ ಆರಂಭಿಸುವವರು, ಮೊದಲಿಗೆ *ಜಿ.ಯು.ಐ. ಇಂಟರ್‌ಫೇಸ್ ಬಳಕೆ ಓದಿಕೊಂಡು,* ನಂತರ *ಭಾಷೆಯ ಬಳಕೆ* ವಿಭಾಗವನ್ನು ಸ್ವಲ್ಪ ಓದಿಕೊಂಡು ಅಭ್ಯಾಸ ಆರಂಭಿಸಬಹುದು.
- ಜಿ.ಯು.ಐ. ಇಂಟರ್‌ಫೇಸ್ ಬಳಕೆಯನ್ನು ಮಾಡದೆಯೇ, ಎಲ್ಲವನ್ನೂ ಆದೇಶಗಳನ್ನು ಬಳಸಿಯೇ ಪ್ರೊಸೀಜರ್‌ಗಳನ್ನು ನೇರವಾಗಿ ಬರೆದು ಅಭ್ಯಾಸ ಮಾಡಬೇಕು ಎನ್ನುವ ತೀವ್ರ ಅಭ್ಯಾಸಿಗಳು *ಭಾಷೆಯ ಬಳಕೆ* ವಿಭಾಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಜಿ.ಯು.ಐ ಇಂಟರ್‌ಫೇಸ್‌ನ ಕನಿಷ್ಠ ಬಳಕೆಯಿಂದಾಗಿ ಹೆಚ್ಚಿನ ರೀತಿಯಲ್ಲಿ ಪ್ರೋಗ್ರಾಂಮಿಂಗ್ ಕಲಿಕೆ ಸಾಧ್ಯವಾಗುತ್ತದೆ. ಉದಾ.: ಲೇಖನಿಗಾತ್ರನಿಗದಿ, ಲೇಖನಿಬಣ್ಣನಿಗದಿ ಮತ್ತು ಲೇಖನಿಎತ್ತು, ಲೇಖನಿಇಳಿಸು ಮುಂತಾದ ಆದೇಶಗಳನ್ನು ಇನ್‌ಪುಟ್ ಸಹಿತ ಆದೇಶಕದಲ್ಲಿ ನೀಡುವ ಮೂಲಕ ನಿಗದಿಗಳನ್ನು ಮಾಡಬಹುದು.
- ಪ್ರತಿಯೊಂದೂ ಆದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ, ಆದೇಶದ ಒಂದು ಸಾಲನ್ನು ವಿಭಜಿಸಿ, ಪ್ರತಿ ವಿಭಾಗಕ್ಕೆ ವಿವರಣೆ ನೀಡಲಾಗಿದೆ. ಉದಾ.: ಮೊದಲಿಗೆ, ಆದೇಶ ಪದ (*ಮುಂದೆ*) ನಂತರ ಅದರ ಅನುಷ್ಠಾನಕ್ಕೆ ಅಗತ್ಯವಿರುವ ಇನ್‌ಪುಟ್ (೧೦೦), ನಂತರ, (ಏನಾದರೂ ಇದ್ದಲ್ಲಿ) ತಾರ್ಕಿಕ ಪರೀಕ್ಷೆ, ತಾರ್ಕಿಕ ಪರೀಕ್ಷೆಯ ಫಲಿತಾಂಶ ಆಧರಿಸಿ ಅನುಷ್ಠಾನಗೊಳಿಸಬೇಕಾದ ಆದೇಶಗಳ ಪಟ್ಟಿ (ಚೌಕಾವರಣದ ಒಳಗಿನ ಆದೇಶಗಳು) ನಂತರ, ಇವುಗಳ ವಿವರಣೆ. ಆ ನಂತರದಲ್ಲಿ ಆದೇಶವನ್ನು ಹೇಗೆ ಬಳಸಬಹುದು ಎಂಬುದಕ್ಕೆ ಒಂದು ಉದಾಹರಣೆ – ಈ ಕ್ರಮದಲ್ಲಿ ಎಲ್ಲಾ ಆದೇಶಗಳಿಗೆ ಒಂದೇ ರೀತಿಯ ವಿವರಣಾ ಕ್ರಮವನ್ನು ಅನುಸರಿಸಲಾಗಿದೆ. ಒಂದು ಆದೇಶ ಸಾಲಿನ ಸಂರಚನೆ ಅಂದರೆ ಸ್ಟ್ರಕ್ಚರ್‌ನ್ನು ಅಭ್ಯಸಿಸಿದರೆ, ಮತ್ತೊಂದರ ರಚನಾಕ್ರಮವನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು.
- ಪ್ರತಿಯೊಂದೂ ಉದಾಹರಣೆಯಲ್ಲಿನ ಒಂದೊಂದೇ ಸಾಲನ್ನು ನಕಲು ಮಾಡಿ (ಕಾಪಿ) ಆದೇಶಕದಲ್ಲಿ ಅಂಟಿಸಿ (ಪೇಸ್ಟ್) ಉದಾಹರಣೆಗಳು ಹೇಗೆ ಕೆಲಸ ನಿರ್ವಹಿಸುತ್ತವೆ, ಆ ಮೂಲಕ ಸಂಬಂಧಿಸಿದ ಆದೇಶವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅಭ್ಯಾಸಿಗಳು ಅರ್ಥೈಸಿಕೊಳ್ಳಬಹುದು. [ಹೀಗೆ ಕಾಪಿ ಪೇಸ್ಟ್ ಮಾಡಿದಾಗ, ಕೆಲವು ಕನ್ನಡ ಅಕ್ಷರಗಳು ಬದಲಾಗುತ್ತವೆ. ಅವುಗಳ ಕುರಿತು ಎಚ್ಚರಿಕೆ ಇರಲಿ. ಉದಾ.: ಹಿಂದೆ ಎಂಬ ಪದದ ಹಿ ಎಂಬುದು " (ಉದ್ಧರಣ ಚಿಹ್ನೆ) ಆಗಿ ಪರಿವರ್ತನೆಗೊಳ್ಳಬಹುದು) ಬದಲಾದ ಅಕ್ಷರವನ್ನು ಮಾತ್ರ ಸೂಕ್ತವಾಗಿ ಮತ್ತೆ ಬೆರಳಚ್ಚಿಸಿ ಆದೇಶದ ಸಾಲನ್ನು ಸರಿಪಡಿಸಿ ಬಳಸಿ]
- ಕಲಿಕಾ ನಂತರದ ಪ್ರೋಗ್ರಾಂಮಿಂಗ್‌ನಲ್ಲಿ ಬೆರಳಚ್ಚಿನ ಸಮಯ, ಶ್ರಮ ಉಳಿತಾಯಕ್ಕಾಗಿ ಬಹುತೇಕ ಆದೇಶಗಳಿಗೆ ಸಂಕ್ಷಿಪ್ತ ರೂಪಗಳನ್ನು ಬಳಸಲಾಗಿದೆ. ಅವುಗಳ ಪ್ರತ್ಯೇಕ ಪಟ್ಟಿಯು ಸಹಾಯ ಕಡತದಲ್ಲಿ ಲಭ್ಯವಿದೆ.
- ಪ್ರತಿಯೊಂದು ಆದೇಶದ ಉಲ್ಲೇಖವು ಸಹಾಯ ಕಡತದಲ್ಲಿ ಬಂದಾಗಲೆಲ್ಲ, ಆ ಆದೇಶದ ಕುರಿತ ಪರಾಮರ್ಶನೆಗಾಗಿ ಅಲ್ಲಲ್ಲಿಯೇ ಕೊಂಡಿಗಳನ್ನು ಅಂದರೆ ಲಿಂಕ್ಸ್‌ಗಳನ್ನು ಕಲ್ಪಿಸಲಾಗಿದೆ. ಇದರಿಂದಾಗಿ ಸುಲಭ ಮಾರ್ಗದಲ್ಲಿ ಪ್ರಯಾಣಿಸಿ ಸಹಾಯವನ್ನು ಪಡೆದುಕೊಳ್ಳಬಹುದು.
- 'ಕನ್ನಡ ಲೋಗೋ' ಕೇವಲ ಚಿತ್ರ ರಚನೆಗಾಗಿರುವ ಪ್ರೋಗ್ರಾಮಿಂಗ್ ಭಾಷೆಯಲ್ಲ. ಬದಲಾಗಿ, ಇದರಲ್ಲಿ ಮೂರು ಆಯಾಮದ (ತ್ರೀಡಿ) ಗ್ರಾಫಿಕ್ಸ್, ಮಲ್ಟಿಮೀಡಿಯಾ ಪರಿಕಲ್ಪನೆಗಳು ಅಂದರೆ, ಪಠ್ಯ, ಧ್ವನಿ ಇತ್ಯಾದಿಗಳ ಕುರಿತಾಗಿ

ಮೂಲತತ್ವಗಳನ್ನು ತಿಳಿಯಲು ಹಲವಾರು ಆದೇಶಗಳನ್ನು ಉದಾಹರಣೆಯೊಂದಿಗೆ ಕನ್ನಡದಲ್ಲಿಯೇ ಈ ಸಹಾಯ ಕಡತದಲ್ಲಿ ವಿವರಿಸಿ ಹೇಳಲಾಗಿದೆ.

**ವಿಶೇಷವಾಗಿ ಗಮನಿಸಿ:** ಈ ಕೈಪಿಡಿಯಲ್ಲಿ ಇರುವ ಯಾವುದೇ ಒಂದು ವಿವರಣೆಯ *ಪದ* ಅಥವಾ *ಆದೇಶ ಪದವು* ಸಹಾಯ ಕಡತದಲ್ಲಿ ಎಲ್ಲೆಲ್ಲಿ ಬಳಕೆಯಾಗಿದೆ ಎಂಬುದನ್ನು ಹುಡುಕಿ, ಆಯಾಯ ವಿವರಣೆಗಳನ್ನು ಅಥವಾ ಆದೇಶಗಳನ್ನು ಬಳಸಿರುವ ಸಂದರ್ಭ, ಬಳಕೆಯ ರೀತಿ ಮತ್ತು ಇತರೆ ವಿವರಗಳನ್ನು ನೀವು ತಿಳಿದುಕೊಳ್ಳಬಹುದು. ಇದರಿಂದ, ಆದೇಶಗಳನ್ನು ಸಮರ್ಥವಾಗಿ ಬಳಸಿ ಹೊಸ ಹೊಸ ಪರಿಣಾಮಕಾರೀ ಪ್ರೊಸೀಜರ್‌ಗಳನ್ನು ರಚಿಸಬಹುದು. ಸಹಾಯ ಕಡತದಲ್ಲಿ ಒಂದು ವಿವರಣ ಪದವನ್ನು ಅಥವಾ ಆದೇಶ ಪದವನ್ನು ಹುಡುಕಲು ಸಹಾಯ –> ಪರಿವಿಡಿ –> Search (tab) ಕ್ಲಿಕ್‌ಮಾಡಿ. ನಂತರ, ಹುಡುಕಬೇಕಾದ ಪದವನ್ನು ಬೆರಳಚ್ಚು ಮಾಡಿ List Topics ಎಂಬುದನ್ನು ಕ್ಲಿಕ್‌ಮಾಡಿ. ನೀವು ನೀಡಿರುವ ಪದ ಇರುವ ಎಲ್ಲಾ ಟಾಪಿಕ್‌ಗಳು ಪಟ್ಟಿಗೊಳ್ಳುತ್ತವೆ. ಎಲ್ಲವನ್ನೂ ಅಥವಾ ಅಗತ್ಯವಾಗಿರುವುದನ್ನು ಓದಬಹುದು.

ಅಧ್ಯಾಯ – ೮

# ಕನ್ನಡ ಲಿಪಿ ಬೆರಳಚ್ಚು

'ಕನ್ನಡ ಲೋಗೋ' ಚಾಲನೆಯಲ್ಲಿದ್ದಾಗ ನಿಮ್ಮ ಕಂಪ್ಯೂಟರಿನ ಸಿಸ್ಟಂ ಟ್ರೇಯಲ್ಲಿ (ಪರದೆಯ ಕೆಳಬಲತುದಿಯಲ್ಲಿ) ಕರ್ನಾಟಕದ ಭೂಪಟದ ಚಿಹ್ನೆ ಕಂಡುಬರುತ್ತದೆ. ಅದನ್ನು ಬಲ ಕ್ಲಿಕ್ ಮಾಡಿದರೆ keyboard layout ಕಂಡುಬರುತ್ತದೆ ಅದನ್ನು ಕ್ಲಿಕ್ ಮಾಡಿದರೆ 'ಕೀಲಿಮಣೆ ವಿನ್ಯಾಸ'ವು ಮೂಡಿಬರುತ್ತದೆ. ಇಂಗ್ಲಿಷ್‌ನ ೨೬ ಅಕ್ಷರಗಳ ಕೀಲಿಗಳಿಗೇ ಕನ್ನಡದ ಎಲ್ಲಾ ಮೂಲ ಅಕ್ಷರಗಳನ್ನು ನಿಗದಿಪಡಿಸಿರುವುದನ್ನು ಗಮನಿಸಿ. ಒಂದು ಇಂಗ್ಲಿಷ್ ಕೀಲಿಸ್ಥಾನದಲ್ಲಿ 'ಮೇಲೆ' ಮತ್ತು 'ಕೆಳಗೆ' ಎರಡು ಕನ್ನಡದ ಅಕ್ಷರಗಳಿವೆ. ಅವೆರಡೂ ಅಕ್ಷರಗಳಿಗೆ ಇರುವ ಸಂಬಂಧವನ್ನು ಗಮನಿಸಿ. ಅಕ್ಷರಗಳು ವ್ಯಂಜನಗಳಾದರೆ ಅವು ಅಲ್ಪಪ್ರಾಣ ಮತ್ತು ಮಹಾಪ್ರಾಣಗಳಾಗಿರುತ್ತವೆ ಹಾಗೂ ಸ್ವರಗಳಾದರೆ ಅವು ಹ್ರಸ್ವ ಸ್ವರಗಳು ಮತ್ತು ದೀರ್ಘ ಸ್ವರಗಳಾಗಿವೆ ಎಂಬುದನ್ನೂ ಸಹ ಗಮನಿಸಿ. ಸಂಬಂಧಿಸಿದ ಇಂಗ್ಲಿಷ್ ಕೀಲಿಯನ್ನು ಸುಮ್ಮನೆ ಒಮ್ಮೆ ಒತ್ತಿದರೆ ಕೆಳಗಿನ ಅಕ್ಷರವೂ, ಅದೇ ಕೀಲಿಯನ್ನು ಶಿಫ್ಟ್ ಹಿಡಿದುಕೊಂಡು ಒತ್ತಿದರೆ ಮೇಲಿನ ಕನ್ನಡ ಅಕ್ಷರವು ಮೂಡುತ್ತದೆ ಎಂಬುದನ್ನು ಎಲ್ಲಾ ಕೀಲಿಗಳು ಸೂಚಿಸುತ್ತಿವೆ ಎಂಬುದನ್ನೂ ಗಮನಿಸಿರಿ.

ಹಾಗಾದರೆ, ಒತ್ತಕ್ಷರಗಳು, ಇಳಿ, ಕೊಂಬು, ಏತ್ವ ಇತ್ಯಾದಿಗಳು ಎಲ್ಲಿ ಎಂದು ಹುಡುಕುತ್ತಿದ್ದೀರಾ? ಅವುಗಳನ್ನು ಪ್ರತ್ಯೇಕವಾಗಿ ನೀವು ಮೂಡಿಸಬೇಕಿಲ್ಲ. ಇರುವ ೨೬ ಕೀಲಿಗಳನ್ನೇ ಬಳಸಿ ಕನ್ನಡವನ್ನು ಉಚ್ಚರಿಸುವ ಕ್ರಮವಲ್ಲಿ ನೀವು ಬೆರಳಚ್ಚು ಮಾಡಿದರೆ ಕನ್ನಡದ ಎಲ್ಲಾ ಸಂಯುಕ್ತಾಕ್ಷರಗಳು, ಒತ್ತಕ್ಷರಗಳು ಎಲ್ಲವನ್ನೂ ಮೂಡಿಸಬಹುದು. ಇದು ಹೇಗೆಂದರೆ, k ಒತ್ತಿದರೆ ಕ ಬರುವಂತೆ, m ಒತ್ತಿದರೆ ಮ ಬರುವಂತೆ ಅಕ್ಷರಸ್ಥಾನ ನಿಗದಿಪಡಿಸಲಾಗಿದೆ. ಹಾಗೆಯೇ, ಸ್ವರಗಳೂ ಸಹ, a ಒತ್ತಿದರೆ ಅ ಬರುವಂತೆ, i ಒತ್ತಿದರೆ ಇ ಬರುವಂತೆ ಹೀಗೆ  ಇದೇ ರೀತಿಯಲ್ಲಿ ಇಂಗ್ಲಿಷ್ ಕೀಲಿಗಳ ಸ್ಥಾನದಲ್ಲಿ ಕನ್ನಡದ ಅಕ್ಷರಗಳನ್ನು ನಿಗದಿಸಲಾಗಿದೆ. ಅವೇ ಇಂಗ್ಲಿಷ್ ಕೀಲಿಗಳನ್ನು ಶಿಫ್ಟ್ ಹಿಡಿದುಕೊಂಡು ಒತ್ತಿದರೆ ಅದಕ್ಕೆ ಅನುಗುಣವಾಗಿ ವ್ಯಂಜನ ಕೀಲಿಗಳಾದರೆ ಮಹಾಪ್ರಾಣಗಳು, ಸ್ವರಗಳ ಕೀಲಿಗಳಾದರೆ ದೀರ್ಘ ಸ್ವರಗಳು ಮೂಡುತ್ತದೆ. ಆದುದರಿಂದ, ಈ ವಿನ್ಯಾಸದಲ್ಲಿ ಕನ್ನಡದ ಅಕ್ಷರಗಳ ಸ್ಥಾನಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು

## ಕಾಗುಣಿತ ಮತ್ತು ಒತ್ತಕ್ಷರಗಳ ಮೂಡಿಕೆ :

ಇವೆಲ್ಲ ಮೂಲ ಅಕ್ಷರಗಳನ್ನು ಮೂಡಿಸುವ ವಿಚಾರವಾಯಿತು, ಗುಣಿತಾಕ್ಷರಗಳು ಮತ್ತು ಒತ್ತಕ್ಷರಗಳನ್ನು ಮೂಡಿಸುವ ಬಗೆ ಹೇಗೆ ? ಇಂಗ್ಲಿಷ್ ಕೀಲಿಮಣೆಯ k ಅನ್ನು ಒತ್ತಿದರೆ ಕನ್ನಡದ 'ಕ' ಮೂಡುತ್ತದೆ, k ಮತ್ತು a ಅನ್ನು ಕ್ರಮವಾಗಿ ಬೆರಳಚ್ಚಿಸಿದರೆ 'ಕಾ' ಮೂಡುತ್ತದೆ", k ಮತ್ತು i ಒತ್ತಿದರೆ 'ಕಿ" ಮೂಡುತ್ತದೆ.  ಇದೇ ಕ್ರಮವನ್ನು ಎಲ್ಲಾ ವ್ಯಂಜನಗಳಿಗೆ ಅನ್ವಯಿಸಿದರೆ 'ಕಾಗುಣಿತ' ಅಂದರೆ ಗುಣಿತಾಕ್ಷರಗಳು ಮೂಡುತ್ತವೆ. ಗುಣಿತಾಕ್ಷರ (ಕಾಗುಣಿತ) ಪಡೆಯಲು ಯಾವುದಾದರೂ ವ್ಯಂಜನವನ್ನು ಒತ್ತಿ ಮತ್ತೆ ಸ್ವರವನ್ನು ಒತ್ತಿದರೆ ಅವೆರಡರ ಗುಣಿತಾಕ್ಷರವು ಮೂಡುತ್ತದೆ. ಉದಾಹರಣೆಗೆ; 'ಕ' ಮತ್ತು 'ಇ' ಸೇರಿ 'ಕಿ' ಆಗುತ್ತದೆ. ಹಾಗೆಯೇ 'ಯ' ಮತ್ತು 'ಓ' ಸೇರಿ 'ಯೋ' ಆಗುತ್ತದೆ. ಎಲ್ಲಾ ವ್ಯಂಜನಗಳ ಗುಣಿತಾಕ್ಷರಗಳನ್ನು ಪಡೆಯಲು ಇದೇ ಕ್ರಮ ಅನುಸರಿಸಬೇಕು.

ಹಾಗಾದರೆ, ಒತ್ತಕ್ಷರಗಳನ್ನು ಮೂಡಿಸುವುದು ಹೇಗೆ? ಕಾಗುಣಿತ ಮೂಡಿಸುವ ತರ್ಕವೇ ಇಲ್ಲಿಯೂ ಅನ್ವಯಿಸುತ್ತದೆ. ಅಲ್ಲಿ ಸ್ವರ ಮತ್ತು ಸ್ವರ ಸೇರಿ ಗುಣಿತಾಕ್ಷರವಾದರೆ. ಇಲ್ಲಿ ಒಂದು ವ್ಯಂಜನ ಮತ್ತೊಂದರೆ ಜೊತೆ ಸೇರಿ ಒತ್ತಕ್ಷರವಾಗುತ್ತದೆ. ಆದರೆ, ಒಂದೇ ವ್ಯತ್ಯಾಸ ಎಂದರೆ ಎರಡು ವ್ಯಂಜನ ಸೇರಿಸಲು ನೀವು ಒಂದು ಲಿಂಕ್ ಕೀಲಿ ಎಂದು ಕರೆಯಲಾಗುವ 'ಎಫ್' ಕೀಲಿಯನ್ನು ಬಳಸಬೇಕು. ಮೊದಲಿಗೆ k ಅನ್ನು ಒತ್ತಿ, ನಂತರ f ಅನ್ನು ಒತ್ತಿ ಕನ್ನಡದ 'ಕ' ಮೂಡುತ್ತದೆ, ಸಂಯುಕ್ತಾಕ್ಷರ (ಪಡೆಯಲು ಒಂದು ವ್ಯಂಜನವನ್ನು ಒತ್ತಿದ ನಂತರ ಅರ್ಧಾಕ್ಷರ ಚಿನ್ಹೆಯನ್ನು ಒತ್ತಬೇಕು ಆನಂತರ ಮತ್ತೊಂದು ವ್ಯಂಜನವನ್ನು ಒತ್ತಿದರೆ ಎಲ್ಲವೂ ಕೂಡಿ ಸಂಯುಕ್ತಾಕ್ಷರವಾಗುತ್ತದೆ. ಉದಾಹರಣೆಗೆ; 'ಕ' ಒತ್ತಿ  ಅರ್ಧಾಕ್ಷರ (ಎಫ್–ಕೀಲಿ) ಒತ್ತಿದರೆ 'ಕ್' ಮೂಡುತ್ತದೆ. ತಕ್ಷಣ ಮತ್ತೆ 'ಕ' ಒತ್ತಿದರೆ 'ಕ್ಕ' ಮೂಡುತ್ತದೆ. ಅರ್ಧಾಕ್ಷರದ ನಂತರ ಕ ಬದಲಿಗೆ ಲ ಒತ್ತಿದರೆ ಕ್ಲ ಆಗುತ್ತದೆ. ಎಲ್ಲಾ ಸಂಯುಕ್ತಾಕ್ಷರಗಳಿಗೂ ಇದೇ ಕ್ರಮವನ್ನು ಅನುಸರಿಸಬೇಕು.

## ಗುಣಿತಾಕ್ಷರಗಳನ್ನು ಬೆರಳಚ್ಚಿಸಲು ಸಮಾನಾಂತರ ಇಂಗ್ಲಿಷ್ ಕೀಲಿಗಳ ಸೂಚಿ :

| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
|---|---|---|---|---|---|---|---|---|---|---|---|---|---|---|
| k | KA | ki | kI | ku | kU | kR | ke | kE | kY | ko | kO | kV | kM | kH |

ಸಂಯುಕ್ತಾಕ್ಷರಗಳೊಂದಿಗೆ ಪದಗಳನ್ನು ಬೆರಳಚ್ಚಿಸಲು ಸಮಾನಾಂತರ ಇಂಗ್ಲಿಷ್ ಕೀಲಿಗಳ ಸೂಚಿ :
ಉತ್ಪನ್ನ = Utfpnfn, ಸತ್ಯ = stfy, ಸ್ತ್ರೀ = sftfrfI, ಸ್ಕೃ = sfkR, ಷ್ಟ್ರೀ = xfqfrI

ವಿಶೇಷವಾಗಿ ಗಮನಿಸಿ : ಕನ್ನಡದ ಉಚ್ಚಾರಣಾ ಕ್ರಮದಲ್ಲಿಯೇ ನಿಮ್ಮ ಬೆರಳಚ್ಚು ಕ್ರಮವೂ ಸಹ ಇರುವುದನ್ನು ಗಮನಿಸಿ. ಎಲ್ಲರೀತಿಯ ಒತ್ತಕ್ಷರಗಳನ್ನು ಬೆರಳಚ್ಚಿಸಿದ ನಂತರವೇ ಕೊನೆಯಲ್ಲಿ ಸ್ವರ ಕೀಲಿಯನ್ನು ಬೆರಳಚ್ಚಿಸಬೇಕು ಎಂಬ ಕ್ರಮ ಗಮನದಲ್ಲಿರಲಿ. ಒಂದಕ್ಕಿಂತ ಹೆಚ್ಚಿನ ಒತ್ತಕ್ಷರವನ್ನು ಮೂಡಿಸಬೇಕಾದರೆ ಲಿಂಕ್ ಕೀಲಿಯನ್ನು ಒತ್ತುವ ಅದೇ ತರ್ಕವನ್ನು ಪುನರಾವರ್ತಿಸಬೇಕು ಎಂಬುದು ಗಮನಿಸಿ.

--- *** ---